Centre for Child & The Law
Celebrating 20th Year CCL

ಸಂಪುಟ-1 ಸಂಚಿಕೆ-1

ಜುಲೈ, 2014-ಜೂನ್, 2015

ಮಗು ಮತ್ತು ಕಾನೂನು ಕೇಂದ್ರ

ಭಾರತ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆ-ಬೆಂಗಳೂರು

# ಬಾಲನ್ಯಾಯ

ಇಂದಿನ ಮಕ್ಕಳೇ ಇಂದಿನ ಪ್ರಜೆಗಳು

## ಮಗು ಮತ್ತು ಕಾನೂನು ಕೇಂದ್ರದ ಆಂತರಿಕ ವಾರ್ತಾಪತ್ರ




- ಶಾಲೆ ಕಡೆ-ನನ್ನ ನಡೆ
- ಶಿಕ್ಷಣ ಹಕ್ಕು- ಕಾರ್ಯಕ್ರಮದ ವರದಿ
- ಮಕ್ಕಳ ಅಪೌಷ್ಠಿಕತೆ: ಒಂದು ಅವಲೋಕನ
- ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ: ಕಠಿಣ ಶಿಕ್ಷೆಯೊಂದೇ ಮಾರ್ಗವೇ?
- ವರದಿಗಳು










ಸಂಪಾದಕ/ಸಂಯೋಜಕರ ನುಡಿ

ಡಾ. ನಿರಂಜನಾರಾಧ್ಯ.ವಿ.ಪಿ


# ಶಾಲೆ ಕಡೆ–ನನ್ನ ನಡೆ: ಶಿಕ್ಷಣ ನನ್ನ ಮೂಲಭೂತ ಹಕ್ಕು

ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ 2009 ಆರರಿಂದ ಹದಿನಾಲ್ಕು ವರ್ಷದೊಳಗಿನ ಪ್ರತಿಯೊಂದು ಮಗುವು ತನ್ನ ಹತ್ತಿರದ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪೂರ್ತಿ ಮಾಡುವವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯುವ ಅವಕಾಶವನ್ನು ಕಲ್ಪಿಸಿದೆ. ಈ ಅವಕಾಶ ಕೇವಲ ಶಾಲೆಗೆ ಸೇರಬಹುದಾದ ಅರ್ಹ ವಯಸ್ಸಿನ ಮಕ್ಕಳಿಗೆ ಅಥವಾ ಶಾಲೆಯಲ್ಲಿ ಈಗಾಗಲೇ ದಾಖಲಾಗಿರುವ 6 ರಿಂದ 14 ವರ್ಷ ವಯಸ್ಸಿನ ಮಕ್ಕಳಿಗೆ ಮಾತ್ರ ಸೀಮಿತವಾಗಿಲ್ಲ. ಆಕಸ್ಮಿಕವಾಗಿ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕಾರಣಗಳಿಂದ ಆರು ವರ್ಷಕ್ಕೂ ಮೇಲ್ಪಟ್ಟ ಮಗುವೊಂದು ಶಾಲೆಗೆ ಸೇರದೆ ಇದ್ದಾಗ ಅಥವಾ ಶಾಲೆಗೆ ಸೇರಿದ್ದರೂ ಕಾರಣಾಂತರ ದಿಂದ ತನ್ನ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸದೆ ಇದ್ದಾಗ, ಅವನ ಅಥವಾ ಅವಳ ವಯಸ್ಸಿಗನುಗುಣ ವಾಗಿ ಸೂಕ್ತವಾದ ತರಗತಿಗೆ ಸೇರುವ ಹಕ್ಕನ್ನು ಸಹ ಕಾಯಿದೆ ಮಕ್ಕಳಿಗೆ ಒದಗಿಸಿದೆ.



ಇಷ್ಟೇ ಅಲ್ಲದೆ, ತನ್ನ ವಯಸ್ಸಿಗನುಗುಣವಾಗಿ ಸೂಕ್ತ ತರಗತಿಗೆ ನೇರವಾಗಿ ಸೇರಿಸಿಕೊಳ್ಳುವ ಮಗು ತಾನು ಸೇರಿಕೊಂಡ ತರಗತಿಯಲ್ಲಿ ಇತರೆ ಸಹಪಾಠಿಗಳ ಜೊತೆಗೆ ಸರಿಸಮಾನವಾಗಿ ಪಾಠಗಳನ್ನು ಕಲಿಯುವಂತೆ ಮಾಡಲು ನಿಗದಿತ ಸಮಯದೊಳಗಾಗಿ ವಿಶೇಷ ತರಬೇತಿ ಪಡೆಯುವ ಹಕ್ಕನ್ನೂ ಸಹ ಕಾಯಿದೆ ಮಕ್ಕಳಿಗೆ ಒದಗಿಸುತ್ತದೆ. ಬಹು ಮುಖ್ಯವಾಗಿ, ಶಾಲೆಗೆ ಹೋಗದ ಮತ್ತು ಮಧ್ಯದಲ್ಲಿ ಶಾಲೆಬಿಟ್ಟ ಮಕ್ಕಳು ಪುನಃ ಶಾಲಾ ಮುಖ್ಯವಾಹಿನಿಗೆ ಸೇರಿದಾಗ ಅಂಥಹ ಮಕ್ಕಳು 8ನೇ ತರಗತಿಯನ್ನು ಪೂರ್ಣಗೊಳಿಸುವ ಮುನ್ನವೇ ಹದಿನಾಲ್ಕು ವರ್ಷ ಪೂರೈಸಿದರೆ, ಅಂತಹ ಮಕ್ಕಳು ಎಂಟು ವರ್ಷದ ಎಲಿಮೆಂಟರಿ ಶಿಕ್ಷಣವನ್ನು ಪೂರೈಸುವವರೆಗೆ, ಅಂದರೆ, ಹದಿನಾಲ್ಕು ವರ್ಷ ದಾಟಿದ ನಂತರವೂ ಎಲಿಮೆಂಟರಿ ಶಿಕ್ಷಣವನ್ನು ಪೂರೈಸುವವರೆಗೆ ಶಿಕ್ಷಣದ ಮೂಲಭೂತ ಹಕ್ಕನ್ನು ಹೊಂದಿರುತ್ತವೆ. ಸರಳವಾಗಿ ಹೇಳುವುದಾದರೆ, ಆರು ವರ್ಷಕ್ಕೆ ಮೇಲ್ಪಟ್ಟ ಮಗುವೊಂದು ಶಾಲೆಗೆ ಸೇರದೆ ಇದ್ದಾಗ ಅಥವಾ ಸೇರಿದ್ದರೂ ಕಾರಣಾಂತರದಿಂದ ತನ್ನ ಎಲಿಮೆಂಟರಿ ಶಿಕ್ಷಣವನ್ನು ಪೂರ್ಣಗೊಳಿಸದೆ ಇದ್ದಾಗ ಅಂಥಹ ಮಗುವಿಗೆ ಎಂಟು ವರ್ಷಗಳ ಎಲಿಮೆಂಟರಿ ಶಿಕ್ಷಣವನ್ನು 14 ವಯಸ್ಸಿನ ಒಳಗೆ ಪೂರ್ಣಗೊಳಿಸಬೇಕೆಂಬ ನಿಬಂಧನೆಗಳಿಲ್ಲ. ಬದಲಿಗೆ, ಅಂತಹ ಮಕ್ಕಳು 14 ವರ್ಷ ದಾಟಿದ ನಂತರವೂ ತಮ್ಮ ಎಂಟು ವರ್ಷದ ಎಲಿಮೆಂಟರಿ ಶಿಕ್ಷಣವನ್ನು ಮುಗಿಸುವವರೆಗೂ ಮೂಲಭೂತ ಹಕ್ಕು ಮುಂದುವರಿಯುತ್ತದೆ.

ನಮಗೆಲ್ಲ ತಿಳಿದಿರುವಂತೆ ಶಾಲೆಗೆ ಸೇರದ ಅಥವಾ ಮಧ್ಯದಲ್ಲಿಯೇ ಶಾಲೆ ಬಿಟ್ಟ ಬಹುತೇಕ ಮಕ್ಕಳು ಅವಕಾಶವಂಚಿತ ಸಮುದಾಯಗಳಿಗೆ ಅದರಲ್ಲೂ ವಿಶೇಷವಾಗಿ; ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಮುಸಲ್ಮಾನ ಅಲ್ಪಸಂಖ್ಯಾತ, ವಲಸೆ, ವಿಶೇಷ ಅಗತ್ಯವುಳ್ಳ, ನಗರ ಅವಕಾಶ ವಂಚಿತ, ಬಾಲ ಕಾರ್ಮಿಕ, ಸಂಕಷ್ಟದಲ್ಲಿರುವ, ಎತ್ತಂಗಡಿಗೊಂಡ, ನಾಗರೀಕ ಸಂಘರ್ಷಕ್ಕೊಳಗಾದ ಇತ್ಯಾದಿ ವರ್ಗಕ್ಕೆ ಸೇರಿದ ಮಕ್ಕಳು .ಈ ಎಲ್ಲ ಮಕ್ಕಳನ್ನು ಪುನಃ ಶಾಲಾ ಮುಖ್ಯವಾಹಿನಿಗೆ ತರುವುದು ಸರ್ಕಾರಗಳ ಆದ್ಯತೆಯಾಗಬೇಕು. ಆಗ ಮಾತ್ರ ಶಿಕ್ಷಣ ಮೂಲಭೂತ ಹಕ್ಕಾದ ಸಾರ್ಥಕತೆ ಸಾಕಾರವಾದಂತಾಗುತ್ತದೆ. ಈ ಮಕ್ಕಳನ್ನು ತಮ್ಮ ವಯಸ್ಸಿಗನುಗುಣವಾದ ತರಗತಿಗಳಿಗೆ ಸೇರಿಸುವ ಪ್ರಮುಖ ಉದ್ದೇಶವೆಂದರೆ ಆ ಮಕ್ಕಳಿಗೆ ತಮಗಿಂತಲೂ ಚಿಕ್ಕವಯಸ್ಸಿನ ಮಕ್ಕಳ ಜೊತೆ ಕುಳಿತುಕೊಳ್ಳುವುದರಿಂದ ಉಂಟಾಗಬಹುದಾದ ಮುಜುಗರ ಮತ್ತು ಅವಮಾನವನ್ನು ತೊಡೆದುಹಾಕುವುದು.

ಆದರೆ, ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆ ಶಾಲೆಗೆ ಸೇರದ ಅಥವಾ ಮಧ್ಯದಲ್ಲಿಯೇ ಶಾಲೆ ಬಿಟ್ಟ ಮಕ್ಕಳನ್ನು ಶಾಲಾ ಮುಖ್ಯವಾಹಿನಿಗೆ ತರುವ ವಿಚಾರದಲ್ಲಿ ಎಡವಿರುವುದು ಎದ್ದು ಕಾಣುತ್ತದೆ. ಈ ಬಗ್ಗೆ 2013 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು

ಸ್ವಯಂ ಪ್ರೇರಿತ ದೂರನ್ನು ದಾಖಲು ಮಾಡಿಕೊಂಡು, ಛೀಮಾರಿ ಹಾಕಿ ಸ್ಪಷ್ಟ ನಿರ್ದೇಶನ ನೀಡಿದ್ದರೂ ಇಲಾಖೆ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಪುನಃ ಶಾಲೆಗೆ ತರಲು ಪರಿಣಾಮಕಾರಿಯಾದ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸುವಲ್ಲಿ ವಿಫಲವಾಗಿದೆ. ನಿಜ ಹೇಳಬೇಕೆಂದರೆ, ಆರ್‌ಟಿಇ ಜಾರಿಯಾಗಿ ಆರು ವರ್ಷ ಕಳೆದರೂ ಸರ್ಕಾರವು ಶಾಲೆಯಿಂದ ಹೊರಗುಳಿದ ಎಲ್ಲ ಮಕ್ಕಳನ್ನು ಕರಾರುವಾಕ್ಕಾಗಿ ಗುರುತಿಸುವಲ್ಲಿ ಸೋತಿದೆ. ಉದಾಹರಣೆಗೆ: ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆಯ ಬಗ್ಗೆ ಸರ್ಕಾರ ವರ್ಷಕ್ಕೊಂದು ರೀತಿಯ ಅಂಕಿ-ಅಂಶಗಳನ್ನು ನೀಡಿದೆ.

ಈ ವಿಷಯದಲ್ಲಿ ಸರ್ಕಾರದ ಅಂಕಿ ಅಂಶಗಳನ್ನು ನೋಡುವುದಾದರೆ, ಆರ್‌ಟಿಇ ಜಾರಿಯಾದ 2010–11ನೇ ಸಾಲಿನಲ್ಲಿ ಸರ್ಕಾರದ ಅಂಕಿ–ಅಂಶಗಳ ಪ್ರಕಾರ ಶಾಲೆಯಿಂದ ಹೊರಗುಳಿದ ಒಟ್ಟು ಮಕ್ಕಳ ಸಂಖ್ಯೆ 39,481. ಇವರಲ್ಲಿ ಶಾಲೆಗೆ ಸೇರಿಲ್ಲದ ಮಕ್ಕಳು 5720 ಮತ್ತು ಮಧ್ಯದಲ್ಲಿ ಶಾಲೆ ಬಿಟ್ಟ ಮಕ್ಕಳು 34,121. ನಿಜ ಹೇಳಬೇಕೆಂದರೆ, ಶಿಕ್ಷಣ ಮೂಲಭೂತ ಹಕ್ಕಾದ ಹಿನ್ನೆಲೆಯಲ್ಲಿ ಈ ಎಲ್ಲಾ ಮಕ್ಕಳು 2011–12ನೇ ಸಾಲಿಗೆ ಕಡ್ಡಾಯವಾಗಿ ಶಾಲೆಯಲ್ಲಿರಬೇಕಿತ್ತು. ಆದರೆ, 2011–12ರ ಸಾಲಿನಲ್ಲಿ ಶಾಲೆ ಬಿಟ್ಟ ಮಕ್ಕಳ ಸಂಖ್ಯೆ ಹಿಂದಿನ ವರ್ಷಕ್ಕಿಂತ ಬಹುತೇಕ ದ್ವಿಗುಣವಾಯಿತು. ಅಂಕಿ–ಅಂಶಗಳ ಪ್ರಕಾರ 2011–12ನೇ ಸಾಲಿನಲ್ಲಿ ಶಾಲೆಯಿಂದ ಹೊರಗಿದ್ದ ಒಟ್ಟು ಮಕ್ಕಳ ಸಂಖ್ಯೆ 68,301. ಇವರಲ್ಲಿ ಶಾಲೆಗೆ ಸೇರಿಲ್ಲದ ಮಕ್ಕಳು 45,462 ಮತ್ತು ಮಧ್ಯದಲ್ಲಿ ಶಾಲೆ ಬಿಟ್ಟ ಮಕ್ಕಳು 22,839. ವಿಚಿತ್ರವೆಂದರೆ, 2011–12 ನೇ ಸಾಲಿನಲ್ಲಿ ಶಾಲೆಗೆ ಸೇರದ ಮಕ್ಕಳ ಸಂಖ್ಯೆ ಶಾಲೆ ಬಿಟ್ಟ ಮಕ್ಕಳ ಸಂಖ್ಯೆಗಿಂತ ದುಪ್ಪಟ. ಶಾಲೆಯಿಂದ ಹೊರಗುಳಿದ 68,301 ಮಕ್ಕಳ ಪೈಕಿ 2012–13 ನೇ ಸಾಲಿನಲ್ಲಿ ಶಾಲೆಗೆ ಮರಳಿ ಬಂದ ಒಟ್ಟು ಮಕ್ಕಳು ಕೇವಲ 16,307. ಹೀಗಾಗಿ, 2012–13ನೇ ಸಾಲಿನಲ್ಲಿ ಶಾಲೆಯಿಂದ ಹೊರಗಿದ್ದ ಒಟ್ಟು ಮಕ್ಕಳ ಸಂಖ್ಯೆ 51,994. ಇವರಲ್ಲಿ ಶಾಲೆಗೆ ಸೇರಿಲ್ಲದ ಮಕ್ಕಳು 4330 ಮತ್ತು ಮಧ್ಯದಲ್ಲಿ ಶಾಲೆ ಬಿಟ್ಟ ಮಕ್ಕಳು 47,664.

ಮತ್ತೊಂದು ಬೆಚ್ಚಿಬೀಳಿಸುವ ಸಂಗತಿಯೆಂದರೆ, 2014–15ರಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ರಾಜ್ಯ ಸರ್ಕಾರ ರಾಷ್ಟ್ರ ಮಟ್ಟದಲ್ಲಿ ತಲೆತಗ್ಗಿಸುವಂತೆ ಮಾಡಿತು. ಶಾಲಾ ದಾಖಲಾತಿ ಹಾಗು ಹಾಜರಾತಿಯಲ್ಲಿ ರಾಷ್ಟ್ರ ಮಟ್ಟದಲ್ಲಿ ಒಳ್ಳೆಯ ಹೆಸರು ಗಳಿಸಿದ್ದ ಸರ್ಕಾರ ತಲೆ ತಗ್ಗಿಸುವಂತಾಯಿತು. 2014 – 15ನೇ ಸಾಲಿನಲ್ಲಿ ಅಂಕಿ–ಅಂಶಗಳ ಪ್ರಕಾರ ಶಾಲೆಯಿಂದ ಹೊರಗುಳಿದ ಒಟ್ಟು ಮಕ್ಕಳ ಸಂಖ್ಯೆ 1,68,621. ಇವರಲ್ಲಿ ಶಾಲೆಗೆ ಸೇರಿಲ್ಲದ ಮಕ್ಕಳು 7842 ಮತ್ತು ಮಧ್ಯದಲ್ಲಿ ಶಾಲೆ ಬಿಟ್ಟ ಮಕ್ಕಳು 1,60,779. ಕಥೆ ಇಷ್ಟಕ್ಕೆ ಮುಗಿಯಲಿಲ್ಲ, ಸರ್ಕಾರ ಜಾದೂ ಮಾಡುವ ರೀತಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು 2015–16 ನೇ ಸಾಲಿನಲ್ಲಿ 9508 ಕ್ಕೆ ಇಳಿಸಿದೆ. ಅಂಕಿ–ಅಂಶಗಳ ಪ್ರಕಾರ, 2015–16ರಲ್ಲಿ ಕರ್ನಾಟಕ ರಾಜ್ಯದಲ್ಲಿ ಶಾಲೆಯಿಂದ ಹೊರಗುಳಿದ ಒಟ್ಟು ಮಕ್ಕಳ ಸಂಖ್ಯೆ 9508.

ಈ ಒಟ್ಟು ಸಂಖ್ಯೆಯಲ್ಲಿ, ಶೈಕ್ಷಣಿಕ ಜಿಲ್ಲಾವಾರು ಹಂಚಿಕೆಯನ್ನು ನೋಡಿದರೆ ನಗಬೇಕೋ–ಅಳಬೇಕೋ ತಿಳಿಯುವುದಿಲ್ಲ.

**ಜಿಲ್ಲಾವಾರು ಹಂಚಿಕೆ ಪ್ರಕಾರ ಬಾಗಲಕೋಟೆ–24; ಬೆಂಗಳೂರು ಗ್ರಾಮಾಂತರ–52; ರಾಮನಗರ–18; ಬೆಂಗಳೂರು ಉತ್ತರ–194; ಬೆಂಗಳೂರು ದಕ್ಷಿಣ–1462; ಬೆಳಗಾವಿ–102; ಚಿಕ್ಕೋಡಿ–85; ಬಳ್ಳಾರಿ–2018; ಬೀದರ್–380; ವಿಜಯಪುರ–64; ಚಾಮರಾಜನಗರ–193; ಉತ್ತರಕನ್ನಡ–32; ಚಿಕ್ಕಮಗಳೂರು–102; ಚಿತ್ರದುರ್ಗ–138; ದಕ್ಷಿಣ ಕನ್ನಡ–140; ದಾವಣಗೆರೆ–246; ಧಾರವಾಡ–121; ಗದಗ–208; ಕಲ್ಬುರ್ಗಿ–993; ಯಾದಗಿರಿ–429; ಹಾಸನ–75; ಹಾವೇರಿ–60; ಕೊಡಗು–46; ಶಿರಸಿ–67; ಕೋಲಾರ–48; ಚಿಕ್ಕಬಳ್ಳಾಪುರ–77; ಕೊಪ್ಪಳ–305; ಮಂಡ್ಯ–227; ಮೈಸೂರು–1002; ರಾಯಚೂರು–342; ಶಿವಮೊಗ್ಗ–117; ತುಮಕೂರು–70; ಮಧುಗಿರಿ–17 ಮತ್ತು ಉಡುಪಿ–54.**

ಈ ಎಲ್ಲ ಅಂಕಿ–ಅಂಶಗಳ ಹಿನ್ನೆಲೆಯಲ್ಲಿ, ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಶಿಕ್ಷಣ ಹಕ್ಕು ಕಾಯಿದೆ 2009ರ ಮೇಲುಸ್ತುವಾರಿಯನ್ನು ಹೊತ್ತಿರುವ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಸಾರ್ವಜನಿಕ ಶಿಕ್ಷಣ, ಕಾರ್ಮಿಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಸಮಾಜ ಕಲ್ಯಾಣ ಇಲಾಖೆ ಮತ್ತು ಭಾರತ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆಯ ಮಗು ಮತ್ತು ಕಾನೂನು ಕೇಂದ್ರ ಸಹಯೋಗದಲ್ಲಿ ಶಾಲೆಗೆ ಹೋಗದ ಮತ್ತು ಶಾಲೆಯಿಂದ ಹೊರಗುಳಿದಿರುವ ಎಲ್ಲ ಮಕ್ಕಳನ್ನು ಪುನಃ ಶಾಲೆಗೆ ಕರೆತರಲು "ಶಾಲೆ ಕಡೆ–ನನ್ನ ನಡೆ: ಶಿಕ್ಷಣ ನನ್ನ ಮೂಲಭೂತ ಹಕ್ಕು" ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಶಾಲೆಯಿಂದ ಹೊರಗಿರುವ ಈ ಮಕ್ಕಳ ಹಕ್ಕು ನನಸಾಗಿ ಎಲ್ಲಾ ಮಕ್ಕಳಿಗೂ ಗುಣಾತ್ಮಕ ಶಿಕ್ಷಣ ಸಿಗಬೇಕಾದರೆ, ಈ ಕಾರ್ಯಕ್ರಮ ಒಂದು ದೊಡ್ಡ ಜನಾಂದೋಲನವಾಗಬೇಕಿದೆ. ಈ ಜನಾಂದೋಲನದಲ್ಲಿ ಶಿಕ್ಷಕರು, ಪಾಲಕರು, ಎಸ್.ಡಿ.ಎಮ್.ಸಿ. ಸದಸ್ಯರು, ದಲಿತ ರೈತ, ವಿದ್ಯಾರ್ಥಿ–ಯುವಜನ, ಸರ್ಕಾರೇತರ ಸಂಘ ಸಂಸ್ಥೆಗಳ ಮತ್ತು ಸಾಮಾಜಿಕ ಚಳುವಳಿಗಳ ಪ್ರತಿನಿಧಿಗಳು–ನಾಯಕರು ಸಕ್ರಿಯವಾಗಿ ಭಾಗವಹಿಸಬೇಕಿದೆ.

# ಮಕ್ಕಳ ಅಪೌಷ್ಠಿಕತೆ: ಒಂದು ಅವಲೋಕನ

ಕೃಷ್ಣ ಭಾರದ್ವಾಜ್

ಅಭಿವೃದ್ಧಿ ಮಾನದಂಡಕ್ಕೆ ಸಂಬಂಧಿಸಿದಂತೆ ಮಹಾತ್ಮಗಾಂಧೀಜಿಯವರು ಹೇಳಿರುವ ಮಾತೊಂದು ಬಹಳ ಅರ್ಥಪೂರ್ಣವಾಗಿದೆ. ಅದು"ಒಂದು ದೇಶದ ವ್ಯವಸ್ಥೆಯನ್ನು ಪರೀಕ್ಷಿಸುವುದು ಅಲ್ಲಿರುವ ಕೋಟ್ಯಾಧೀಶರ ಸಂಖ್ಯೆಯಿಂದ ಅಲ್ಲ. ಬದಲಾಗಿ ಆ ದೇಶದ ಜನಗಳ ಹಸಿವಿನಿಂದ ಮುಕ್ತರಾಗಿದ್ದಾರೆಯೇ ಎಂದು ಪರೀಕ್ಷಿಸುವುದರಿಂದ".



ಗಾಂಧೀಜಿಯವರ ಈ ಮಾತಿನ ಹಿನ್ನೆಲೆಯಲ್ಲಿ, ಯಾವುದೇ ದೇಶದ ಅಭಿವೃದ್ಧಿಯನ್ನು ಅಲ್ಲಿಯ ಮಕ್ಕಳ ಸ್ಥಿತಿಯ ಮೇಲೆ ನಿರ್ಧರಿಸಬಹುದು ಎಂದರೆ ಅದು ಉತ್ಪ್ರೇಕ್ಷೆಯಾಗಲಾರದು. ಐದು ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣವನ್ನು ಮೂಲ ಅಭಿವೃದ್ಧಿ ಸೂಚಕವನ್ನಾಗಿ ಪರಿಗಣಿಸಿ ದೇಶ ಮುಂದುವರೆಯುತ್ತಿದೆಯೇ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸಬಹುದಾಗಿದೆ.ಆದ್ದರಿಂದ ಮಕ್ಕಳ ಪೌಷ್ಠಿಕತೆಯ ಕೊರತೆಯನ್ನು ನೀಗಿಸುವುದರಿಂದ ಒಂದು ದೇಶದ ಅಭಿವೃದ್ಧಿ ಸಾಧ್ಯ.

ವಿಶ್ವಸಂಸ್ಥೆಯ ಆಹಾರ ಕೃಷಿ ಸಂಘಟನೆ (ಎಫ್.ಎ.ಒ) ಇತ್ತೀಚಿನ ಅಂದಾಜಿನ ಪ್ರಕಾರ 96.3 ಕೋಟಿ ಜನ ಸದಾ ಹಸಿವಿನಿಂದ ಬಳಲುತ್ತಿದ್ದಾರೆ. 2009ರಲ್ಲಿ ಹಸಿದ ಜನಸಂಖ್ಯೆ ಚರಿತ್ರೆಯಲ್ಲಿ ಮೊದಲ ಬಾರಿಗೆ 100 ಕೋಟಿ ದಾಟಿದೆ ಎಂದು ಅದು ಎಚ್ಚರಿಕೆ ನೀಡಿದೆ. 1990 ರಿಂದ 2005ರ ಅವಧಿಯಲ್ಲಿ ಹಸಿದವರ ಸಂಖ್ಯೆ 80–85 ಕೋಟಿ ಆಸುಪಾಸಿನಲ್ಲಿ ಇದ್ದು ಏರಿಕೆ ಕಂಡಿರಲಿಲ್ಲ. ಆದರೆ ಕಳೆದ ಎರಡು–ಮೂರು ವರ್ಷಗಳಿಂದ ಅದು ಸತತವಾಗಿ ಏರುತ್ತಿದೆ. ಪೌಷ್ಠಿಕಾಂಶಗಳ ಕೊರತೆಯಿಂದ ನರಳುತ್ತಿರುವ ಸಂಖ್ಯೆ ಇದರ ಮೂರು ಪಟ್ಟು; ಜಗತ್ತಿನ ಜನಸಂಖ್ಯೆಯ ಹೆಚ್ಚು ಕಡಿಮೆ ಅರ್ಧದಷ್ಟು. ಅತ್ಯಂತ ಶ್ರೀಮಂತ ದೇಶ ಅಮೇರಿಕಾದಲ್ಲೂ ಆಹಾರದ ಅಭದ್ರತೆ ಇರುವವರ ಸಂಖ್ಯೆ ಸುಮಾರು ಮೂರುವರೆ ಕೋಟಿ (ಅಂದರೆ ಎಂಟರಲ್ಲಿ ಒಬ್ಬರು). ಪ್ರತಿದಿನ 18 ಸಾವಿರ ಮಕ್ಕಳು ಹಸಿವು ಅಥವಾ ಪೌಷ್ಠಿಕಾಂಶಗಳ ಕೊರತೆಯ ನೇರ ಅಥವಾ ಪರೋಕ್ಷ ಪರಿಣಾಮದಿಂದ ಸಾಯುತ್ತಾರೆ ಎಂದು ವಿಶ್ವ ಸಂಸ್ಥೆಯು ಅಂದಾಜು ಮಾಡಿದೆ.

ವಿಶ್ವ ಆಹಾರ ದಿನದಂದು (ಅಕ್ಟೋಬರ್ 16, 2008) ಪ್ರಕಟಿಸಲಾದ 2008 ರ 'ಹಸಿವಿನ ಸೂಚಕ' ಸಮಸ್ಯೆಯ ಭೀಕರತೆಯನ್ನು ಕಣ್ಣಿಗೆ ಕಟ್ಟುವ ಹಾಗೆ ತೋರಿಸಿದೆ. ಅಂತಾರಾಷ್ಟ್ರೀಯ ಆಹಾರ ನೀತಿ ಸಂಶೋಧನಾ ಸಂಸ್ಥೆ (IFPRI) ಹಸಿವಿನ ಸೂಚಕವನ್ನು ಲೆಕ್ಕಹಾಕಿ ಪ್ರತಿವರ್ಷ ಪ್ರಕಟಿಸುತ್ತದೆ. ಹಸಿವಿನ ಸೂಚಕ ಹಸಿವನ್ನು ನಿಗದಿತ ಅಗತ್ಯ ಕ್ಯಾಲೋರಿ ಸಹ ಪೂರೈಕೆ ಆಗದಷ್ಟು (ಇದು ಹಸಿವಿನ ನೇರ ಮಾಪಕ) ಆಹಾರ ಸೇವಿಸುವವರ ಪ್ರಮಾಣ, ಮಕ್ಕಳ ಮರಣದ ಪ್ರಮಾಣ ಮತ್ತು ಪೌಷ್ಠಿಕಾಂಶಗಳ ಅಭಾವ ಇರುವ ಮಕ್ಕಳ ಪ್ರಮಾಣ ಈ ಮೂರು ಅಂಶಗಳ ಮೂಲಕ ಅಳೆಯುತ್ತದೆ.

ನಮ್ಮ ದೇಶದಲ್ಲಿ ಪೌಷ್ಠಿಕಾಂಶಗಳ ಕೊರತೆಯಿಂದ ಬಳಲುವ ಮಕ್ಕಳ ಪ್ರಮಾಣ ಶೇ 47 ಇದು ಸಹರಾ, ಮರುಭೂಮಿ ಪ್ರದೇಶದ ಪ್ರಮಾಣದ ಇಮ್ಮಡಿ. ಚೀನಾದ ಪ್ರಮಾಣದ ಐದು ಪಟ್ಟು. ಜಗತ್ತಿನಲ್ಲೇ ಅತೀ ಹೆಚ್ಚು ಮಕ್ಕಳ ಮರಣ ಪ್ರಮಾಣ ಹೊಂದಿರುವ ದೇಶಗಳಲ್ಲಿ ಭಾರತ ಸೇರಿದೆ. ಕರ್ನಾಟಕ 'ಅಪಾಯಕಾರಿ' ಮಟ್ಟದ 12 ರಾಜ್ಯಗಳಲ್ಲಿ 6ನೇ ಸ್ಥಾನದಲ್ಲಿದೆ. ಮಧ್ಯಪ್ರದೇಶದಲ್ಲಿ ಹಸಿವಿನ ಪರಿಸ್ಥಿತಿ ಅತ್ಯಂತ



ಗಂಭೀರವಾಗಿದ್ದು ಅದರ 'ಹಸಿವಿನ ಸೂಚಕ' ಹಸಿವಿಗೆ ಸುಪ್ರಸಿದ್ಧ ವಾದ ಇಥಿಯೋಪಿಯಾದ (ಅಂದರೆ ಜಗತ್ತಿನಲ್ಲೇ ಕೆಳಗಿನಿಂದ 8 ನೇ ಸ್ಥಾನ) ಹತ್ತಿರವಿದೆ. ಮಧ್ಯಪ್ರದೇಶದ ಒಂದು ಕೋಟಿಗೂ ಹೆಚ್ಚಿನ ಮಕ್ಕಳಲ್ಲಿ ಶೇ.60 (ಅಂದರೆ ಐದು ಮಕ್ಕಳಲ್ಲಿ ಮೂವರು) ಪೌಷ್ಠಿಕಾಂಶಗಳ ಕೊರತೆಯಿಂದ ಬಳಲುತ್ತಿದ್ದಾರೆ.

ಪುಟ 16ರಲ್ಲಿ ಮುಂದುವರೆದಿದೆ...

## ಆಹಾರದ ಹಕ್ಕು ಕಾರ್ಯಕ್ರಮದ ವರದಿ

ಸಿಸಿಎಲ್ ಸಿದ್ಧಪಡಿಸಿದ ಕರ್ನಾಟಕ ಆಹಾರ ಭದ್ರತಾ ನಿಯಮಗಳ ಕರಡಿನ ಸಲ್ಲಿಕೆ : ಕರ್ನಾಟಕದ ಒಳಗೆ ಮತ್ತು ಹೊರಗಿನ ಪ್ರದೇಶಗಳಲ್ಲಿನ ಮೂಲ ವಾರಸುದಾರರ ಜೊತೆ ವಿಚಾರ ವಿಮರ್ಶೆಯ ಕ್ರಿಯೆಗಳನ್ನೊಳಗೊಂಡ ವಿಸ್ತೃತ ಸಂಶೋಧನೆಯ ನಂತರ, ಕರ್ನಾಟಕ ಆಹಾರ ಭದ್ರತಾ ನಿಯಮಗಳು, 2014 ರ ಕರಡನ್ನು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಕರ್ನಾಟಕ ಸರ್ಕಾರ ಇವರಿಗೆ 2014ರ ಜುಲೈ 2ರಂದು ಸಲ್ಲಿಸಲಾಯಿತು.

ಸೀಮೆಗಳಾಚೆಗೆ ಹಕ್ಕುಗಳ ಆಧಾರಿತ ಆಡಳಿತ: ಹೆಚ್ಚುವರಿ ಪ್ರಾದೇಶಿಕ ಜವಾಬ್ದಾರಿಗಳ ಪಾತ್ರ (ಇ ಟಿ ಒ) ದ ಮೇಲಿನ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಇ ಟಿ ಒ ಒಕ್ಕೂಟದ ಸಮಿತಿಯ ಶೈಕ್ಷಣಿಕ ಸದಸ್ಯರಾದ ಡಾ. ನೀತು ಶರ್ಮರವರು, 2014 ರ ಸೆಪ್ಟೆಂಬರ್ 1 ರಿಂದ 3 ತಾರೀಖಿನವರೆಗೆ ಬ್ಯಾಂಕಾಕ್‌ನಲ್ಲಿ ನಡೆದ ಈ ಸಮ್ಮೇಳನದಲ್ಲಿ ಪಾಲ್ಗೊಂಡರು. ಆಹಾರದ ಹಕ್ಕಿನ ಸಂಬಂಧದಲ್ಲಿ ಇಟಿಒ ಗಳ ಪಾತ್ರ ವಿಶೇಷವಾಗಿ ಭಾರತದಲ್ಲಿ ಪ್ರಸ್ತುತ ಆಗುತ್ತಿರುವ ಬೆಳವಣಿಗೆಯ ವಿಷಯವಾಗಿ ಚರ್ಚಿಸಿದರು. ಚುಲಲೊಂಕರ್ನ್ ವಿಶ್ವವಿದ್ಯಾಲಯದ ಇಟಿಒ ಒಕ್ಕೂಟವು ಆಯೋಜಿಸಿದ್ದ ಈ ಸಮ್ಮೇಳನದಲ್ಲಿ, ಗ್ಲೋಬಲ್ ಸೌತ್ ಬಗ್ಗೆ, ಸ್ಟಕೋಮ್ ಪರಿಸರ ಸಂಸ್ಥೆ ಮತ್ತು ಮಹಿಳೆ, ಕಾನೂನು ಮತ್ತು ವಿಕಾಸದ ಏಷಿಯಾ ಪೆಸಿಫಿಕ್ ಫೋರಮ್‌ಗಳು ಅಂತಾರಾಷ್ಟ್ರೀಯ ಕಾನೂನು ಮತ್ತು ಸಂಬಂಧಗಳನ್ನು ಅರ್ಥೈಸಿಕೊಳ್ಳುವಲ್ಲಿ ಮಾನವ ಹಕ್ಕುಗಳು ಸ್ಥಾಪಿತವಾದುದೆಂಬುದನ್ನು ಬಲಪಡಿಸಲು; ಈ ಸಂಬಂಧದಲ್ಲಿ ಇಟಿಒಗಳ ಪಾತ್ರವನ್ನು ಸ್ಪಷ್ಟಗೊಳಿಸಲು; ಮತ್ತು ಆಹಾರ ಮತ್ತು ನೀರಿನ ಭದ್ರತೆ ಮತ್ತು ಜವಾಬ್ದಾರಿಯುತ ಆಡಳಿತದ ಮೇಲಿನ ಹಕ್ಕುಗಳ ಆಧಾರವನ್ನು ವಿಶ್ವ ಸಮ್ಮೇಳನದ ಮೂಲಕ ಬಲಪಡಿಸಲು ಮತ್ತು ತಂತ್ರಗಳನ್ನು ಸ್ಥಾಪಿಸಲು ಚರ್ಚಿಸಲಾಯಿತು.

ಸಮಗ್ರ ಶಿಶು ವಿಕಾಸ ಯೋಜನೆ (ಪೂರಕ ಪೋಷಣೆ) ನಿಯಮ, 2014 ರ ಮೇಲಿನ ಟಿಪ್ಪಣಿ:

ಕೇಂದ್ರ ಸರ್ಕಾರವು ಸಮಗ್ರ ಶಿಶು ವಿಕಾಸ ಯೋಜನೆ (ಪೂರಕ ಪೋಷಣೆ) ನಿಯಮ, 2014 ರ ಮೇಲಿನ ರಾಜ್ಯ ಸರ್ಕಾರಗಳಿಂದ ಸಲಹೆಗಳನ್ನು ಕೇಳಿ ಹೊರಡಿಸಿದ ಸುತ್ತೋಲೆಯ ಪ್ರಕಾರ, ಟಿಪ್ಪಣಿಯನ್ನು ಆರ್ ಟಿ ಎಫ್ ಕಾರ್ಯಕ್ರಮವು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರದ ಮೂಲಕ ಸಲ್ಲಿಸಲಾಗಿದೆ.

2014ರ ನವಂಬರ್ 10ರಂದು ಮಾನವ ಸಂಪನ್ಮೂಲ ವಿಕಾಸದ ಮೇಲಿನ ಪಾರ್ಲಿಮೆಂಟಿನ ಸ್ಥಾಯಿ ಸಮಿತಿಗೆ ಮಧ್ಯಾಹ್ನದ ಬಿಸಿಯೂಟದ ಕಾರ್ಯಕ್ರಮದ ಅನುಷ್ಠಾನದ ಮೇಲಿನ ತನ್ನ ಶಿಫಾರಸ್ಸನ್ನು ಆರ್ ಟಿ ಎಫ್ ಕಾರ್ಯಕ್ರಮವು ಸಲ್ಲಿಸಿತು.

ಪಜಾ/ಪವ ಮೆಟ್ರಿಕ್ ಪೂರ್ವ ಹಾಸ್ಟೆಲ್‌ಗಳಲ್ಲಿ ಮಕ್ಕಳಿಗೆ ಆಹಾರದ ಹಕ್ಕಿನ ಬಗ್ಗೆ ಪರಿಶೋಧನಾತ್ಮಕ ಅಧ್ಯಯನ; ಪಜಾ/ಪವ ಗಳ ಪ್ರಿ-ಮೆಟ್ರಿಕ್ ಹಾಸ್ಟೆಲ್‌ಗಳಲ್ಲಿ ಮಕ್ಕಳಿಗೆ ಆಹಾರದ ಹಕ್ಕಿನ ಬಗ್ಗೆ ಆರ್ ಟಿ ಎಫ್ ಟೀಮ್ ಒಂದು ಪ್ರಾಯೋಗಿಕ ಅಧ್ಯಯನವನ್ನು ನಡೆಸಿತು. ಅಧ್ಯಯನದ ಉದ್ದೇಶ್ಯ ಈ ಸಂಸ್ಥೆಗಳಲ್ಲಿ ಮಕ್ಕಳಿಗೆ ದೊರಕುತ್ತಿರುವ ಆಹಾರ ಮತ್ತು ಪೋಷಣೆಯ ನಿರ್ಣಯ ಮತ್ತು ವಿಶ್ಲೇಷಣೆ.



ಈ ಮಕ್ಕಳ ವಯಸ್ಸು, ವಾಸ ಮತ್ತು ಸಾಮಾಜಿಕ ಹಿನ್ನೆಲೆಯ ಕಾರಣಗಳಿಂದ ಬಹುಸ್ತರದ ಅಭಾವಗಳಿಗೆ ಈ ಸಂಸ್ಥೆಗಳಲ್ಲಿರುವ ಮಕ್ಕಳು ತುತ್ತಾಗುವ ನಿಜಾಂಶವೇ ಈ ಸಂಸ್ಥೆಗಳಲ್ಲಿರುವ ಮಕ್ಕಳ ಆಹಾರದ ಹಕ್ಕಿನ ಸ್ಥಿತಿಯನ್ನು ಅಧ್ಯಯನ ಮಾಡಲು ಮುಖ್ಯ ಕಾರಣ. ಈ ಸಂಸ್ಥೆಗಳು ಮುಖ್ಯವಾಗಿ ಮಕ್ಕಳ ವಿದ್ಯಾಭ್ಯಾಸದ ಅವಶ್ಯಕತೆಗಳನ್ನು ಪೂರೈಸುವುದರಿಂದ, ಭಾರತದಲ್ಲಿ ಮಕ್ಕಳ ಅಪೌಷ್ಟಿಕತೆಯ ಪ್ರಮಾಣ ಅತಿ ಹೆಚ್ಚಾಗಿದ್ದರೂ ಅವರ ಆಹಾರದ ಅವಶ್ಯಕತೆಗಳು ಕಡೆಗಣಿಸಲ್ಪಡುತ್ತವೆ. ಅದರಲ್ಲೂ ಚಾರಿತ್ರಿಕವಾಗಿ ಕಡೆಗಣಿಸಿದ ಸಮುದಾಯಗಳ ಈ ಮಕ್ಕಳ ವಿಷಯದಲ್ಲಿ ಬಹಳ.

2014ರ ಡಿಸೆಂಬರ್ 30ರಂದು ಪಾಟ್ನಾದಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (ಎನ್ ಎಫ್ ಎಸ್ ಎ) ಅಡಿಯಲ್ಲಿ ನಿಯಮ ಮಾಡುವ ಬಗ್ಗೆ ಸಮಾಲೋಚನೆ;

ಡಾ. ನೀತು ಶರ್ಮ ಮತ್ತು ಶ್ರೀಮತಿ ನೀನು ಸುರೇಶ್ ರವರು ನವಜ್ಯೋತಿ ಭವನ, ಪಾಟ್ನಾದಲ್ಲಿ 2014ರ ಡಿಸೆಂಬರ್ 30ರಂದು ಬಿಹಾರ್ ರಾಜ್ಯದ ವಿವಿಧ ಜಿಲ್ಲೆಗಳ ಕೈ ಪಾಲುದಾರರ ಜೊತೆ ಸಮಾಲೋಚನೆಯನ್ನು ನಡೆಸಿದರು. ಸಮಾಲೋಚನೆಯ ಮುಖ್ಯ ಉದ್ದೇಶ್ಯವು ಎನ್‌ಎಫ್‌ಎಸ್‌ಎ ಅಡಿಯಲ್ಲಿ ನಿಯಮಗಳನ್ನು ರೂಪಿಸುವಾಗ ಕರ್ನಾಟಕ ರಾಜ್ಯದ ಜೊತೆ ಸಿಸಿಎಲ್ ಪಡೆದ ಅನುಭವ ಹಾಗೂ ಕಲಿಕೆ ಮತ್ತು ಬಿಹಾರದ ನಾಗರಿಕ ಸಮಾಜದ ಸಂಸ್ಥೆಗಳ ಅನ್ವೇಷಣೆ. ತಂಡವು ರಾಜ್ಯದಲ್ಲಿ ನಿಯಮ ರೂಪಿಸುವ ಸ್ಥಿತಿಯನ್ನು ಅರಿಯಲು, ಶ್ರೀ ಹುಕುಮ್ ಸಿಂಗ್ ಮೀನಾ, ಮುಖ್ಯ ಕಾರ್ಯದರ್ಶಿ, ಆಹಾರ ಮತ್ತು ಗ್ರಾಹಕ ರಕ್ಷಣಾ ಇಲಾಖೆ, ಬಿಹಾರ ಇವರನ್ನು ಭೇಟಿ ಮಾಡಿತು. ಎನ್ ಎಫ್ ಎಸ್ ಎ ಅಡಿಯಲ್ಲಿ ವಿವಿಧ ಅಂಶಗಳ ಮೇಲೆ ರಾಜ್ಯ ಸರ್ಕಾರವು ರೂಪಿಸಿದ ನಿಯಮಗಳ ಮೇಲಿನ ಶಿಫಾರಸ್ಸುಗಳನ್ನು ತಂಡವು ರೂಪಿಸಿ ಸಲ್ಲಿಸಿದೆ.

2015ರ ಮೇ 22ರಿಂದ 24ರ ವರೆಗೆ ಭಾರತದಲ್ಲಿ ಆಹಾರ ಭದ್ರತೆಯಲ್ಲಿ ರಾಜಕೀಯದ ಬಗ್ಗೆ ನಾಟಕ ಆಡಲಾಯಿತು; ಆರ್ ಟಿ ಎಫ್ ತಂಡ ಕಾನೂನು ಸೇವಾ ಕ್ಲಿನಿಕ್ ಮತ್ತು ಭಾರತ್ ಜ್ಞಾನ ವಿಜ್ಞಾನ ಸಮಿತಿ, ಕರ್ನಾಟಕದ ಸಹಯೋಗದಲ್ಲಿ XV ನೇ ಅಖಿಲ ಭಾರತೀಯ ಪೀಪಲ್ಸ್ ಸೈನ್ಸ್ ಕಾಂಗ್ರೆಸ್ ನಲ್ಲಿ ದೇಶದಲ್ಲಿ ಆಹಾರ ಭದ್ರತೆಯ ಬಗೆಗಿನ ರಾಜಕೀಯದ ಮೇಲೆ ನಾಟಕ ಆಡಲಾಯಿತು. ನಾಟಕವು ಅಭಿವೃದ್ಧಿ ಹೊಂದುತ್ತಿರುವ ಭಾರತದಂತಹ ದೇಶದಲ್ಲಿ ಆಹಾರ ಭದ್ರತೆಯಿಲ್ಲದೆ ಬೇರೆ ಯಾವುದೇ ಹಕ್ಕುಗಳು ದೊರಕಲಾರದೆಂಬುದನ್ನು ತೋರಿಸಿದೆ. ದೇಶದ ಶಕ್ತಿಯುತ ಆರ್ಥಿಕ ಮತ್ತು ರಾಜಕೀಯ ಶಕ್ತಿಗಳು ಸಾಮಾನ್ಯ ಜನರಿಗೆ ಆಹಾರ ಭದ್ರತೆಯ ಹೊಂದುವಿಕೆಯನ್ನು ಕನಸಾಗಿಸಿವೆ. ರಾಜ್ಯಗಳ ಬೃಹತ್ ಆರ್ಥಿಕ ನೀತಿಗಳ ಕಾರಣದಿಂದ ಏನು ಬೆಳೆಯ ಬೇಕೆಂದು ತಿಳಿಯದೆ, ತಿನ್ನಲು ಏನೂ ಸಿಗದೆ ಪ್ರಾಣ ಕಳೆದುಕೊಳ್ಳುವ ಸ್ಥಿತಿ ತಲುಪುತ್ತಿದೆ. ನಾಟಕವು ವೀಕ್ಷಕರಿಗೆ ಏಕೆ ಹೀಗಾಗುತ್ತಿದೆ ಎಂಬ ಪ್ರಶ್ನೆಯನ್ನು ಕೇಳಿದೆ. ಮತ್ತು ಆಹಾರ ಭದ್ರತೆಯ ರಾಜಕೀಯದ ಬಗ್ಗೆ ಗಮನ ಕೊಡಲು ಎಚ್ಚರಿಸಿದೆ. ನಾಟಕವನ್ನು https://www.youtube.com/watch?v=0j1ik 5YMvyo. ನಲ್ಲಿ ನೋಡಬಹುದಾಗಿದೆ.



ಮಧ್ಯಾಹ್ನದ ಬಿಸಿಯೂಟ ಯೋಜನೆಗೆ ನಿಯಮ ರೂಪಿಸಲು ಶಿಫಾರಸ್ಸುಗಳು; ಜಂಟಿ ನಿರ್ದೇಶಕರು, ಮಧ್ಯಾಹ್ನದ ಬಿಸಿಯೂಟದ ಇಲಾಖೆ, ಕರ್ನಾಟಕ ಸರ್ಕಾರ. ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ 2013 ರ ಅಡಿಯಲ್ಲಿ ಎಮ್‌ಡಿಎಮ್‌ಎಸ್ ನಿಯಮಗಳ ಕರಡನ್ನು ತಯಾರಿಸಲು, ಸಿಸಿಎಲ್, ಎನ್‌ಎಲ್‌ಎಸ್‌ಐ ಯು ಗೆ ಭೇಟಿ ನೀಡಿ ಆರ್ ಟಿಎಫ್ ನ ಬೆಂಬಲ ಕೇಳಿದರು, ಹಾಗೂ ತಂಡವನ್ನು 2015ರ ಮೇ 27ರಂದು ಸಮಾಲೋಚನೆಗಾಗಿ ಆಹ್ವಾನಿಸಿದರು. ತದನಂತರ ಶ್ರೀಮತಿ ನೀನು ಸುರೇಶ್ ಮತ್ತು ಕುಮಾರಿ ಅಂಜಲಿಯವರು ಎಮ್ ಪಿ ಪಿ ವಿಧ್ಯಾರ್ಥಿಗಳನ್ನು ಜೊತೆಗೂಡಿ ಅಂತರ್ವಿಭಾಗೀಯ ಪ್ರಕೃತಿಯ ಸಮಾಲೋಚನೆಯಲ್ಲಿ ಭಾಗವಹಿಸಿದರು. ಸರ್ಕಾರವು ಗುರುತಿಸಿದ ವಿಷಯಗಳ ಬಗ್ಗೆ ವಿಸ್ತೃತ ಮತ್ತು ಗಂಭೀರ ಚರ್ಚೆಗಳಾದವು. ಇಲಾಖೆಯ ವಿನಂತಿಯಂತೆ ಆರ್‌ಟಿಎಫ್ ತಂಡವು ಎನ್‌ಎಫ್‌ಎಸ್‌ಎ ಅಡಿಯಲ್ಲಿ ಎಮ್‌ಡಿಎಮ್‌ಎಸ್ ನಿಯಮ ರೂಪಿಸಲು ಶಿಫಾರಸ್ಸುಗಳನ್ನು ತಯಾರಿಸಿತು, ಇದನ್ನು 2015ರ ಜೂನ್ 2 ಮತ್ತು 3ರಂದು ವಿವಿಧ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳ, ಎಮ್ ಹೆಚ್ ಆರ್ ಡಿ ಜೊತೆಗಿನ ರಾಷ್ಟ್ರೀಯ ಸ್ತರದ ಸಭೆಯಲ್ಲಿ ಚರ್ಚಿಸಲು ಉಲ್ಲೇಖಿಸಲು ನೀಡಿದೆ.

ಹಕ್ಕುಗಳ ದೃಷ್ಟಿಯಲ್ಲಿ ರಾಜಕೀಯದ ಬಗ್ಗೆ 2015ರ ಮ 29ರಂದು ಸಾರ್ವಜನಿಕ ಉಪನ್ಯಾಸ; ಆಹಾರದ ಹಕ್ಕಿನ ತಂಡವು ಎನ್ ಆರ್ ಇ ಜಿ ಎ ಮತ್ತು ಎನ್ ಎಫ್ ಎಸ್ ಎ ಗಳಿಗೆ ವಕೀಲಿ ಮತ್ತು ನಿಯಮಗಳನ್ನು ರೂಪಿಸಲು ಸಕ್ರಿಯವಾಗಿ ತೊಡಗಿಸಿಕೊಂಡಿರುವ ಮತ್ತು ಪ್ರಸ್ತುತ ಐಐಟಿ ದೆಹಲಿಯಲ್ಲಿ ಪ್ರಾಧ್ಯಾಪಕರಾಗಿರುವ ಡಾ. ರೀತಿಕಾ ಖೇರಾ, ಅರ್ಥಶಾಸ್ತ್ರಜ್ಞರು ಮತ್ತು ಸಾಮಾಜಿಕ ವಿಜ್ಞಾನಿಗಳಿಂದ ಸಾರ್ವಜನಿಕ ಉಪನ್ಯಾಸವನ್ನು ಬಿಜಿವಿಎಸ್ ಕರ್ನಾಟಕದ ಸಹಯೋಗದೊಂದಿಗೆ ಎಮ್‌ಪಿಪಿ ಕ್ಲಾಸ್ ರೂಮಿನಲ್ಲಿ ದಿನಾಂಕ 29 ಮೇ 2015 ರಂದು ಆಯೋಜಿಸಿತು. ಡಾ. ರೀತಿಕಾರವರು ಎನ್‌ಆರ್‌ಇಜಿಎ ಮತ್ತು ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (ಎನ್‌ಎಫ್‌ಎಸ್‌ಎ) ಸಂದರ್ಭದಲ್ಲಿ ಹಕ್ಕುಗಳ ದೃಷ್ಟಿಯಲ್ಲಿ ರಾಜಕೀಯದ ಬಗ್ಗೆ ಮಾತನಾಡಿದರು ಮತ್ತು ಇದಾದ ನಂತರ ಚರ್ಚೆ ನಡೆಯಿತು. ಎನ್‌ಎಲ್‌ಎಸ್‌ಐಯು, ಬೆಂಗಳೂರು ವಿಶ್ವವಿದ್ಯಾಲಯ, ಎನ್‌ಐಎಎಸ್ ಮತ್ತು ಐಐಎಸ್‌ಸಿ ನ ವಿಧ್ಯಾರ್ಥಿಗಳು ಮತ್ತು ಸಂಶೋಧಕರುಗಳು ಸಾರ್ವಜನಿಕ ಉಪನ್ಯಾಸದಲ್ಲಿ ಪಾಲ್ಗೊಂಡರು,

ಮೇ 29ರಿಂದ ಜೂನ್ 5ನೇ ತಾರೀಖು 2015ರ ವರೆಗೆ ಢಾಕಾದಲ್ಲಿ ನಡೆದ ದಕ್ಷಿಣ ಏಷಿಯಾ ಆಹಾರದ ಹಕ್ಕಿನ ಸಮ್ಮೇಳನ; ಡಾ. ನೀತು ಶರ್ಮ, ಕಾರ್ಯಕ್ರಮ ಮುಖ್ಯಸ್ಥರು, ಬಾಂಗ್ಲಾ ದೇಶದ ಢಾಕಾದಲ್ಲಿ ಬಡತನ ವಿರೋಧಿ ವೇದಿಕೆಯ (ಎಪಿಪಿ) ಆಶ್ರಯದಲ್ಲಿ ನಡೆದ 4 ದಿನದ ದಕ್ಷಿಣ ಏಶಿಯಾ ಆಹಾರದ ಹಕ್ಕಿನ ಸಮ್ಮೇಳನದಲ್ಲಿ ಭಾಗವಹಿಸಿದರು. ಸಮ್ಮೇಳನವನ್ನು ಬಾಂಗ್ಲಾ ದೇಶದ ಪ್ರಧಾನ ಮಂತ್ರಿಗಳಾದ ಶ್ರೀಮತಿ ಶೇಖ್ ಹಸೀನಾರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಇತರ ಪ್ರಮುಖರಲ್ಲಿ ನೋಬೆಲ್ ಪುರಸ್ಕೃತ ಭಾರತದ ಶ್ರೀ ಕೈಲಾಶ್ ಸತ್ಯಾರ್ಥಿ, ನೇಪಾಳದ ಆಹಾರದ ಹಕ್ಕಿನ ರಾಷ್ಟ್ರೀಯ ಸಂಯೋಜಕರಾದ ಶ್ರೀ ಸರ್ಬರಾಜ್ ಖಡ್ಕಾರವರು ಉಪಸ್ಥಿತರಿದ್ದರು. ಡಾ. ನೀತು ಶರ್ಮ ರವರು ದಕ್ಷಿಣ ಏಷಿಯಾದಲ್ಲಿ ಆಹಾರ ಭದ್ರತೆಯ ಮೇಲಿನ ಕಾನೂನಿನ ಚೌಕಟ್ಟಿನ ಬಗ್ಗೆಯ ಸತ್ರದ ಒಬ್ಬ ಸದಸ್ಯರಾಗಿದ್ದರು. ಜೂನ್ 3 ರಂದು ಆಹಾರ ಭದ್ರತೆಯ ಜಾಗತಿಕ ವಕಾಲತ್ತಿನ ಬಗ್ಗೆ ಜಾಗತಿಕ ಸಂವಾದ ನಡೆಸಲಾಯಿತು. ಸಮ್ಮೇಳನವು ಆಹಾರ ಭದ್ರತೆಗಾಗಿ ದಕ್ಷಿಣ ಏಷಿಯಾ ನೆಟ್ವರ್ಕ್ ಪ್ರಾರಂಭ ಮಾಡುವುದ ರೊಂದಿಗೆ ಸಂಪನ್ನವಾಯಿತು.

**ಜನವರಿ 31 ಮತ್ತು ಫೆಬ್ರುವರಿ 1 ರಂದು ಸೇಲಂ ಗೆ ಮಾನ್ಯತೆ ಭೇಟಿ:** ಆರ್‌ಟಿಎಫ್ ತಂಡದ ಕುಮಾರಿ ಅಂಜಲಿಯವರು ಸಿಆರ್‌ವೈ (ಸಿಸಿಎಲ್, ಎನ್ ಎಲ್ ಎಸ್ ಐ ಯು ನ ದಾನಿಗಳು) ತನ್ನ ಸ್ವಯಂ ಸೇವಕರಿಗಾಗಿ ಆಯೋಜಿಸಿದ್ದ ಮಾನ್ಯತೆ ಭೇಟಿಯಲ್ಲಿ ಪಾಲ್ಗೊಂಡಿದ್ದರು. ಭೇಟಿಯ ಉದ್ದೇಶ್ಯ, ಸಿಆರ್‌ವೈ ಸದಸ್ಯರು ತಮ್ಮ ಅನುಭವಗಳನ್ನು ತಮ್ಮ ಸಹ ಸದಸ್ಯರೊಂದಿಗೆ ಹಂಚಿಕೊಂಡು ಸಾರ್ವಜನಿಕ ಕ್ರಿಯಾ ಗುಂಪುಗಳಲ್ಲಿ ಕೆಲಸ ಮಾಡುವುದಾಗಿತ್ತು. ಅಂಜಲಿಯವರು ಈ ಅನುಭವ ಬಹುಮೂಲ್ಯ ಪಾಠವಾಗಿತ್ತೆಂದು ಹೇಳಿದರು.

# ಬಾಲ ನ್ಯಾಯ: ಕಾರ್ಯಕ್ರಮಗಳ ವರದಿ

## ಬಾಲ ನ್ಯಾಯ ವ್ಯವಸ್ಥೆಯೊಳಗಿರುವ ಮಕ್ಕಳಿಗಾಗಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳು



1) ಮಗು ಮತ್ತು ಕಾನೂನು ಕೇಂದ್ರ, ಸಿ.ಸಿ.ಎಲ್. ಸಂಸ್ಥೆಯ ಜುವಿನೈಲ್ ಜಸ್ಟೀಸ್ ಟೀಮ್ ಪ್ರತಿ ವರ್ಷ ಸುಮಾರು 20 ಕ್ಕೂ ಹೆಚ್ಚು ಬಾಲ ನ್ಯಾಯ ವ್ಯವಸ್ಥೆಯೊಳಗಿರುವ ಮಕ್ಕಳಿಗೆ ಸಾಮಾಜಿಕ ಹಾಗೂ ಕೌನ್ಸಲಿಂಗ್ ಒಳಗುಳ್ಳ ಸಮಗ್ರ ಸೇವೆಗಳನ್ನು ಒದಗಿಸುತ್ತದೆ ಹಾಗೂ ಬಾಲ ನ್ಯಾಯ ಮಂಡಳಿಯ ಮುಂದೆ ಹಾಜರು ಪಡಿಸಿದ/ಪಡಿಸಲಪಡುವ ಮಕ್ಕಳಿಗೆ ಕಾನೂನುರೀತ್ಯ ಸೇವೆಯನ್ನು ಕೂಡ ನೀಡುತ್ತದೆ (Psycho–social–legal services to children and their family).

2) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದಿಂದ ಈ ಕೆಳಕಂಡ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು.

❖ 2014 ರಲ್ಲಿ ಒಂದು ಮಕ್ಕಳ ಗ್ರಂಥಾಲಯವನ್ನು(ಜ್ಞಾನ ದೇಗುಲ) ಪರಿವೀಕ್ಷಣಾಲಯದಲ್ಲಿ ಉದ್ಘಾಟಿಸಿದ್ದಾರೆ.

❖ ಮಕ್ಕಳ ದಿನಾಚರಣೆಯ ಸಲುವಾಗಿ "ಮಕ್ಕಳ ಜಾತ್ರೆ" ಕಾರ್ಯಕ್ರಮವನ್ನು ಐ.ಐ.ಪಿ.ಆರ್. (ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈಕಾಲಜಿ ಅಂಡ್ ರಿಸರ್ಚ್) ಹಾಗೂ ಐ.ಪಿ.ಐ. (ಇಂಡಿಯನ್ ಪ್ಲೇ ಇನ್ಸ್‌ಟಿಟ್ಯೂಟ್) ಸಂಸ್ಥೆಯ ಬೆಂಬಲದಿಂದ ಇದನ್ನು ಆಯೋಜಿಸಿದ್ದಾರೆ.

3) ಇದಲ್ಲದೆ, ಪ್ರಸ್ತುತ ಅವಧಿಯಲ್ಲಿ ಕೇಂದ್ರ ಸರ್ಕಾರ ಪ್ರಸ್ತಾಪಿಸಿದ ಜ್ಯೂವಿನೈಲ್ ಜಸ್ಟೀಸ್ ಬಿಲ್ 2014, ಲೈಂಗಿಕ ಅಪರಾಧ ಗಳಿಂದ ಮಕ್ಕಳ ಸಂರಕ್ಷಣೆ ಕಾಯ್ದೆ–2012 (POSCO ACT) ಸಂಬಂಧಿಸಿದಂತೆ ಸಾಕಷ್ಟು ಸಂಶೋಧನೆ ಕೈಗೊಳ್ಳುತ್ತದೆ.

**ಜೆ.ಜೆ.ಬಿಲ್ 2014 ಕ್ಕೆ ಸಂಬಂಧಪಟ್ಟ ಕೆಲಸ ಕಾರ್ಯಗಳು**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ ಪ್ರಸ್ತಾಪಿಸಿದ ಜ್ಯೂವಿನೈಲ್ ಜಸ್ಟೀಸ್ ಬಿಲ್–2014 (ಜೆ.ಜೆ.ಬಿಲ್)ಗೆ ಜ್ಯೂವಿನೈಲ್ ಜಸ್ಟೀಸ್ ಟೀಮ್ ತಮ್ಮ ಅಭಿಪ್ರಾಯಗಳನ್ನು ಸಲ್ಲಿಸಿದ್ದಾರೆ. ಈ ಮೂಲಕ ಈ ಬಿಲ್ಲಿನಲ್ಲಿ ಹೇಳಿರುವ ವಿಚಾರಗಳೇನೆಂದರೆ.


1) 16 ರಿಂದ 18 ವರ್ಷದ ಮಕ್ಕಳು ಗಂಭೀರ ಕೃತ್ಯವನ್ನು ಎಸಗಿದ್ದಾರೆಂದು ಬಾಲನ್ಯಾಯ ಮಂಡಳಿಯು ನಿರ್ಧರಿಸಿದ್ದಲ್ಲಿ. ಈ ಮಕ್ಕಳನ್ನು ಕಾನೂನಿನ ಪ್ರಕಾರ ಸ್ಥಾಪಿಸಿದ್ದ "ಸುರಕ್ಷಿತ ಸ್ಥಳ" ಕ್ಕೆ ರವಾನಿಸುತ್ತಾರೆ. 21 ವರ್ಷ ತುಂಬಿದಾಗ ಬಾಲ ನ್ಯಾಯಮಂಡಳಿಯು ಈ ವ್ಯಕ್ತಿಯು ಸುಧಾರಿಸಿಲ್ಲವೆಂದು ತೀರ್ಮಾನ ತೆಗೆದುಕೊಂಡಲ್ಲಿ, ಅವನು/ಅವಳನ್ನು ವಯಸ್ಕರಿಗೆ ಇರುವ ಜೈಲಿಗೆ ಕಳುಹಿಸುತ್ತಾರೆ.

2) ಜೆ.ಜೆ. ಬಿಲ್ ನಲ್ಲಿರುವ ಈ ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಜ್ಯೂವಿನೈಲ್ ಜಸ್ಟೀಸ್ ಟೀಮ್ ಆಳವಾಗಿ ಸಂಶೋಧನೆ ಮಾಡಿದ್ದು, ಅದನ್ನು ತೀವ್ರವಾಗಿ ಖಂಡಿಸಿ ದಿನಪತ್ರಿಕೆಗಳಲ್ಲಿ, ಬ್ಲಾಗ್‌ಗಳಲ್ಲಿ ಲೇಖನವನ್ನು ಪ್ರಕಟಿಸಿದ್ದಾರೆ. ಇದೇ ವಿಷಯವು ಕುರಿತು ಎರಡು ಸಮಾಲೋಚನೆಯನ್ನು ರಾಷ್ಟ್ರೀಯಮಟ್ಟದಲ್ಲಿ ಆಯೋಜಿಸಿದ್ದಾರೆ ಹಾಗೂ ಪಾರ್ಲಿಮೆಂಟರಿ ಸ್ಟ್ಯಾಂಡಿಂಗ್ ಕಮಿಟಿ ಮುಂದೆ ತಮ್ಮ ಅಭಿಪ್ರಾಯವನ್ನು ಮಂಡಿಸಲು ಆಹ್ವಾನಿಸಿದ್ದರು.

**ಅಂತರಾಷ್ಟ್ರೀಯ ಪ್ರಶಸ್ತಿ:–** ನಮ್ಮ ಕೊಡುಗೆಯನ್ನು ಗುರುತಿಸಿ 2014 ರಲ್ಲಿ ಇಂಟರ್ ನ್ಯಾಷನಲ್ ಜ್ಯೂವಿನೈಲ್ ಜಸ್ಟೀಸ್ ಅಬ್ಸರ್‌ವೇಟರಿ ಯು ಸುಬ್ರಹ್ಮಣ್ಯಸ್ವಾಮಿ ಕೇಸಿನಲ್ಲಿ ಮಧ್ಯಸ್ಥವಹಿಸಿದ, ಸಿ.ಸಿ.ಎಲ್. ಒಳಗೊಂಡ 6 ಸಮಸ್ಯೆಗಳಿಗೆ ಅಂತಾರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿರುತ್ತಾರೆ.

**ಕೆಪಾಸಿಟಿ ಬಿಲ್ಡಿಂಗ್ ಪ್ರೋಗ್ರಾಮ್:–** ಜೆ.ಜೆ. ಟೀಮ್‌ನ ಸದಸ್ಯರು ಬಾಲನ್ಯಾಯ ಕಾಯ್ದೆ (ಜೆ.ಜೆ ಆಕ್ಟ್) ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣೆ ಕಾಯ್ದೆ (POCSO ACT) ಹಾಗೂ ಇತರ ಮಕ್ಕಳ ಸುರಕ್ಷತೆಗೆ ಸಂಬಂಧಪಟ್ಟ ಕಾನೂನಿನ ಬಗ್ಗೆ ಮಕ್ಕಳ ಕಲ್ಯಾಣ ಸಮಿತಿ (CWC), ಇಂಟಿಗ್ರೇಟೆಡ್ ಚೈಲ್ಡ ಪ್ರೊಟೆಕ್ಷನ್ ಸ್ಕೀಮ್(ICPS) ಸಿಬ್ಬಂದಿ ಗಳಿಗೆ ಹಾಗೂ ಪ್ರೊಬೇಷನರಿ ಆಫೀಸರ್ಸ್‌ಗೆ ತರಬೇತಿ ನೀಡಿದ್ದಾರೆ.

POCSO ಅಧಿನಿಯಮದಲ್ಲಿ ರಚಿಸಲ್ಪಟ್ಟ ಸ್ಪೆಷಲ್ ಕೋರ್ಟ್‌ಗಳ ಕಾರ್ಯನಿರ್ವಹಣೆ ಕುರಿತು ಅಧ್ಯಯನವನ್ನು ಪ್ರಾರಂಭಿಸಿದೆ.







## ಶಿಕ್ಷಣ ಹಕ್ಕು- ಕಾರ್ಯಕ್ರಮದ ವರದಿ

### ಜುಲೈ-ಡಿಸಂಬರ್ 2014 ವರೆಗಿನ ಚಟುವಟಿಕೆ

1.ಮಗು ಮತ್ತು ಕಾನೂನು ಕೇಂದ್ರ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ, ಬಿಸಿಯೂಟ ತಯಾರಕರ ಮಹಿಳಾ ಸಂಘಟನೆ, ಜಿಲ್ಲಾ ವಕೀಲರ ಸಂಘ ಹಾಗೂ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆಯ ಸಹಯೋಗದೊಂದಿಗೆ ರಾಮನಗರ ಜಿಲ್ಲೆಯ ನಾಲ್ಕು ತಾಲ್ಲೂಕು ಕೇಂದ್ರಗಳಲ್ಲಿ ಸಾರ್ವಜನಿಕ ಅಹವಾಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಮಾಗಡಿ, ಚನ್ನಪಟ್ಟಣ, ಕನಕಪುರ ತಾಲ್ಲೂಕಿನಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು. ರಾಮನಗರ ತಾಲ್ಲೂಕಿನಲ್ಲಿ ಜಿಲ್ಲಾ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳಾದ ಗೌರವಾನ್ವಿತ ಶ್ರೀ ಹೆಚ್.ಎಸ್ ಹೊಸಗೌಡರ್ ಉದ್ಘಾಟನೆ ಮಾಡಿದರು. ಮಕ್ಕಳ ಕಲ್ಯಾಣ ಸಮಿತಿಯು ಸದಸ್ಯರು ತೀರ್ಪುಗಾರರಾಗಿ ಭಾಗವಹಿಸಿದ್ದರು. ಒಟ್ಟು 710 ಜನ ಅಹವಾಲು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸುಮಾರು 108 ದೂರುಗಳನ್ನು ಆಲಿಸಲಾಯಿತು. ಬಹುಪಾಲು ದೂರುಗಳು ಶಾಲೆಗಳಲ್ಲಿನ ಮೂಲಭೂತ ಸೌಕರ್ಯದ ಕೊರತೆ, ಶಿಕ್ಷಕರ ಕೊರತೆ ಹಾಗೂ ಕಲಿಕೆಯ ಗುಣಮಟ್ಟದ್ದು, ಮಧ್ಯಾಹ್ನದ ಬಿಸಿಯೂಟ ಯೋಜನೆಗೆ ಅನಿಲ ಪೂರೈಕೆ ಸಮಸ್ಯೆಗಳಿಗೆ ಸಂಬಂಧಿಸಿದವಾಗಿದ್ದವು.

ಶಾಲಾ ಗುಣಮಟ್ಟವನ್ನು ಹೆಚ್ಚಿಸುವ ದೃಷ್ಟಿಯಿಂದ ಬನ್ನಿಕುಪ್ಪೆ (ಬಿ) ಪಂಚಾಯತಿ ವ್ಯಾಪ್ತಿಯ 10 ಹಳ್ಳಿಗಳಲ್ಲಿ ನನ್ನ ಜಾಗ ನನ್ನ ಕೇಂದ್ರಗಳನ್ನು ನಡೆಸಲಾಯಿತು. ಹತ್ತು ಜನ ಸ್ವಯಂ ಸೇವಕರು ಕೆಲಸ ನಿರ್ವಹಿಸಿದರು. ಒಟ್ಟು 253 ಜನ ಮಕ್ಕಳು ಈ ಕೇಂದ್ರಗಳ ಸದುಪಯೋಗ ಪಡೆದುಕೊಂಡರು.

2. ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಣದಲ್ಲಿ ಗುಣಾತ್ಮಕತೆಯನ್ನು ತರುವ ದೃಷ್ಟಿಯಿಂದ ಅಂಗನವಾಡಿ ಕಾರ್ಯಕರ್ತೆಯರಿಗೆ ಇಂಗ್ಲಿಷ್ ಕಲಿಕೆ ಕುರಿತಂತೆ ಒಟ್ಟು ಐದು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

3. ಶಿಕ್ಷಣ ಹಕ್ಕು ಕಾಯಿದೆ ಸಂಬಂಧಿಸಿದಂತೆ ಒಟ್ಟು ಆರು ಉಪನ್ಯಾಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

4. ವಿಶೇಷ ಮಕ್ಕಳ ಗ್ರಾಮಸಭೆ: ಮಗು ಮತ್ತು ಕಾನೂನು ಕೇಂದ್ರವು ಬನ್ನಿಕುಪ್ಪೆ (ಬಿ) ಗ್ರಾಮ ಪಂಚಾಯತಿ ಸಹಯೋಗದೊಂದಿಗೆ "ಮಕ್ಕಳ ಗ್ರಾಮಸಭೆಯನ್ನು ದಿನಾಂಕ :–28–11–2014 ರಂದು ಬನ್ನಿಕುಪ್ಪೆಯ ಶಾಲಾ ಆವರಣದಲ್ಲಿ ಆಯೋಜಿಸಲಾಗಿತ್ತು. ಪ್ರತಿ ಜನವಸತಿ ಪ್ರದೇಶದಿಂದ ಸಂಗ್ರಹಿಸಿದ್ದ ಮಕ್ಕಳ ಸಮಸ್ಯೆಗಳನ್ನು ಮಕ್ಕಳೇ ಸಭೆಯಲ್ಲಿ ಮಂಡಿಸಿದರು. ಶಾಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ, ಒಳಚರಂಡಿ ಸಮಸ್ಯೆ, ಆಟದ ಮೈದಾನದ ಕೊರತೆ ಸಮರ್ಪಕವಾದ ಶೌಚಾಲಯ ವಿಲ್ಲದಿರುವುದು. ಮೊದಲಾದ ಸಮಸ್ಯೆಗಳು ಅನಾವರಣಗೊಂಡವು. ಬನ್ನಿಕುಪ್ಪೆ (ಬಿ) ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ಪಾರ್ವತಮ್ಮ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಣ ತಜ್ಞರಾದ ಡಾ॥ ನಿರಂಜನಾರಾಧ್ಯ ವಿ.ಪಿ ರವರು ಸಭೆಯನ್ನು ಉದ್ಘಾಟಿಸಿದರು.

5. ಬನ್ನಿಕುಪ್ಪೆ (ಬಿ) ಪಂಚಾಯತಿ ಮಟ್ಟದ ಮಕ್ಕಳ ಕಾವಲು ಸಮಿತಿಯ ಐದು ಸಭೆಗಳು ನಡೆದವು. ಪ್ರತಿ ಸಭೆಯಲ್ಲೂ ಸರಾಸರಿ 12 ಜನ ಮಕ್ಕಳು ಭಾಗವಹಿಸಿದ್ದರು. ಮಕ್ಕಳ ಹಕ್ಕುಗಳ ಉಲ್ಲಂಘನೆ, ಮಕ್ಕಳ ಮೇಲಿನ ದೈಹಿಕ ಶಿಕ್ಷೆ, ಶಾಲೆಗಳ ಮೂಲಭೂತ ಸೌಕರ್ಯಗಳು ಸೇರಿದಂತೆ ವಿವಿಧ ವಿಷಯಗಳನ್ನು ಚರ್ಚಿಸಲಾಯಿತು.

6. ಬಾಲ ವಿಕಾಸ ಸಮಿತಿ ಸದಸ್ಯರಿಗೆ ಎರಡನೇ ಹಂತದ ಸಾಮರ್ಥ್ಯವರ್ಧನೆ ತರಬೇತಿ ಕಾರ್ಯಕ್ರಮವನ್ನು ನಡೆಸಲಾಯಿತು. ಈ ತರಬೇತಿ ಗ್ರಾಮ ಮಟ್ಟದಲ್ಲಿ ನಡೆಯಿತು, ಒಟ್ಟು 215 ಜನ ಬಾಲ ವಿಕಾಸ ಸಮಿತಿ ಸದಸ್ಯರು ಈ ತರಬೇತಿಯ ಸದುಪಯೋಗ ಪಡೆದುಕೊಂಡರು , ಈ ತರಬೇತಿಯಲ್ಲಿ ಬಾಲ ವಿಕಾಸ ಸಮಿತಿಯ ರಚನೆ, ಜವಾಬ್ದಾರಿಗಳ ಬಗ್ಗೆ ತಿಳಿಸಿಕೊಡಲಾಯಿತು.

7. ಬನ್ನಿಕುಪ್ಪೆ (ಬಿ) ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಸ್,ಡಿ,ಎಂ,ಸಿ, ಸದಸ್ಯರಿಗೆ ಎರಡನೇ ಸುತ್ತಿನ ಸಾಮರ್ಥ್ಯವರ್ಧನೆ ತರಬೇತಿ ಕಾರ್ಯಕ್ರಮವನ್ನು ನಡೆಸಲಾಯಿತು. ಈ ತರಬೇತಿಯು ಶಾಲಾ ಹಂತದಲ್ಲಿ ನಡೆಯಿತು. 307 ಜನ ಎಸ್,ಡಿ,ಎಂ,ಸಿ, ಸದಸ್ಯರು ಈ ತರಬೇತಿಯ ಸದುಪಯೋಗ ಪಡೆದುಕೂಂಡರು.



8. ಅಂಗನವಾಡಿ ಶಿಕ್ಷಕಿಯರ ಅಗತ್ಯಗಳನ್ನು ಆಧರಿಸಿ ಎರಡು, ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಹಮ್ಮಿಕೂಳ್ಳಲಾಯಿತು. ಮೊದಲನೇ ತರಬೇತಿ ಕಾರ್ಯಕ್ರಮವು ದಿನಾಂಕ : 8–11–2014 ರಂದು "ಮಕ್ಕಳಿಗೆ ಸುರಕ್ಷತೆ ಮತ್ತು ಆರೋಗ್ಯಕರ ಪೌಷ್ಠಿಕ ಆಹಾರ", ಎಂಬ ವಿಷಯದ ಬಗ್ಗೆ ನಡೆಯಿತು. ಪ್ರಖ್ಯಾತ ತಜ್ಞರಾದ ಡಾ॥ ಕೆ.ಸಿ. ರಘು ರವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ತರಬೇತಿ ನಡೆಸಿಕೊಟ್ಟರು.

ಎರಡನೆಯ ತರಬೇತಿ ಕಾರ್ಯಕ್ರಮವು ದಿನಾಂಕ : 13–12–2014 ರಂದು "ಮಕ್ಕಳಿಗೆ ಚುಚ್ಚುಮದ್ದು", ಎಂಬ ವಿಷಯವನ್ನು ಕುರಿತು ಡಾ॥ ಸುದರ್ಶನ ರವರು ತರಬೇತಿ ನೀಡಿದರು.

9. ಜಿಲ್ಲಾ ಎಸ್,ಡಿ,ಎಂ,ಸಿ ಸಮನ್ವಯ ವೇದಿಕೆಯ ಎರಡು ಸಭೆಗಳು ಅನುಕ್ರಮವಾಗಿ ದಿನಾಂಕ : 16–08–2014 ರಂದು ಹಾಗೂ ದಿನಾಂಕ: 10–12–2014 ರಂದು ನಡೆದವು. ರಾಮನಗರ ಜಿಲ್ಲೆಯ



ವ್ಯಾಪ್ತಿಯ ನಾಲ್ಕು ಬ್ಲಾಕ್‌ಗಳ ಎಸ್.ಡಿ.ಎಂ.ಸಿ.ಸಿ.ಎಫ್, ಪದಾಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು, ಪಂಚಾಯಿತಿ ಮಟ್ಟದಲ್ಲಿ ವೇದಿಕೆಗಳನ್ನು ಗಟ್ಟಿಗೊಳಿಸುವುದರ ಬಗ್ಗೆ ರೂಪುರೇಶೆಗಳ ಬಗ್ಗೆ ಚರ್ಚಿಸಲಾಯಿತು, ಸರ್ಕಾರಿ ಶಾಲಾ ಮಕ್ಕಳಿಗೆ ಸೂಕ್ತ ಗುಣಮಟ್ಟದ ಶಿಕ್ಷಣವನ್ನು ಸಿಗುವ ನಿಟ್ಟಿನಲ್ಲಿ ಕಾರ್ಯಕ್ರಮಗಳು ಆಯೋಜನೆ ಆಗಬೇಕಿದೆ ಎಂದು ಚರ್ಚಿಸಲಾಯಿತು.

10. ಈ ಅವಧಿಯಲ್ಲಿ ಶಾಲೆಯಿಂದ ಹೊರಗುಳಿದ 8 ಮಕ್ಕಳನ್ನು ಪತ್ತೆಹಚ್ಚಲಾಯಿತು, ಗ್ರಾಮ ಸಂಯೋಜಕರು ಮತ್ತು ಸಹಾಯಕ ಗ್ರಾಮ ಸಂಯೋಜಕರ ನಿರಂತರ ಶ್ರಮದಿಂದಾಗಿ ಒಟ್ಟು 7 ಮಕ್ಕಳನ್ನು ಶಾಲೆಗೆ ಸೇರಿಸಲಾಯಿತು, ಒಂದು ಮಗುವು ತೀವ್ರ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದರಿಂದ ಶಾಲೆಗೆ ಸೇರಿಸಲು ಸಾಧ್ಯವಾಗಲಿಲ್ಲ.

| ದಿನಾಂಕ | ವಿಷಯ | ಉಪನ್ಯಾಸಕರು | ಭಾಗವಹಿಸಿದವರು |
|---|---|---|---|
| 30–8–2015 | ಶಿಕ್ಷಣ ಮತ್ತು ಸಾಮಾಜಿಕ ಜವಾಬ್ದಾರಿ | ಡಾ|| ಜಿ ರಾಮಕೃಷ್ಣ | 60 |
| 27–9–2014 | ಶಿಕ್ಷಣ ಹಕ್ಕು ಮತ್ತು ಅಭಿವೃದ್ಧಿ ರಾಜಕಾರಣ | ಡಾ. ಎಚ್.ಡಿ ಪ್ರಶಾಂತ್ | 70 |
| 30–09–2014 | ಅಕ್ಷರ ದಾಸೋಹ ಕಾರ್ಯಕ್ರಮ | ಶ್ರೀ ಸಿ.ವಿ ತಿರುಮಲರಾವ್ | 100 |
| 25–10–2014 | ಗುಣಾತ್ಮಕ ಶಿಕ್ಷಣ ಶಿಕ್ಷಕರ ಮುಂದಿರುವ ಸವಾಲುಗಳು ಮತ್ತು ಸಾಧ್ಯತೆಗಳು | ಕೈದಾಳ್ ಕೃಷ್ಣಮೂರ್ತಿ | 30 |
| 27–11–2014 | ಶಿಕ್ಷಣ ಮತ್ತು ರಂಗಕಲೆ | ಗೋಪಾಲ ಕೃಷ್ಣ ನಾಯರಿ | 50 |
| 10–12–2014 | ಮಾನವ ಹಕ್ಕಿನ ಭಾಗವಾಗಿ ಶಿಕ್ಷಣದ ಹಕ್ಕು | ಪ್ರೊ. ವೈ.ಜೆ ರಾಜೇಂದ್ರ | 75 |

11. ಈ ಅವಧಿಯಲ್ಲಿ ಶಾಲಾಪೂರ್ವ ಶಿಕ್ಷಣಕ್ಕೆ ಸಂಬಂಧಿಸಿದಂತೆ ಒಟ್ಟು 4 ಇಂಗ್ಲಿಷ್ ಕಲಿಕಾ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಯಿತು. ಈ ತರಬೇತಿ ಕಾರ್ಯಗಾರಗಳು ಪ್ರತಿ ತಿಂಗಳ ಎರಡನೇ ಶನಿವಾರ ನಡೆದವು, ಎಲ್ಲಾ 16 ಅಂಗನವಾಡಿ ಕಾರ್ಯಕರ್ತೆಯರು ಈ ತರಬೇತಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಬೇಸಿಕ್ ಇಂಗ್ಲಿಷ್ ಮತ್ತು ರೈಮ್ಸ್‌ಗಳನ್ನು ಕಲಿಸಲಾಯಿತು. ನಂತರ ತರಬೇತಿ ಸಾಮಾಗ್ರಿಗಳನ್ನು ವಿತರಿಸಲಾಯಿತು.

12. ಬನ್ನಿಕುಪ್ಪೆ (ಬಿ) ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸದಸ್ಯರುಗಳಿಗೆ ಶಿಕ್ಷಣ ಹಕ್ಕು ಕಾಯಿದೆ ಕುರಿತಂತೆ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 18–12–2014 ರಂದು ಹಮ್ಮಿಕೊಳ್ಳಲಾಗಿತ್ತು. ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಶ್ರೀಯುತ ಶಿವಮಾದುರವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದರು. ಶಿಕ್ಷಣ ಹಕ್ಕು ಕಾಯಿದೆ ಅನುಷ್ಠಾನದಲ್ಲಿ ಪಂಚಾಯಿತಿಯು ನಿರ್ವಹಿಸಬೇಕಾದ ಪ್ರಮುಖ ಕರ್ತವ್ಯಗಳನ್ನು ಸುದೀರ್ಘವಾಗಿ ತಿಳಿಯಪಡಿಸಲಾಯಿತು.

13. ಶಿಕ್ಷಣ ಕಾರ್ಯಕ್ರಮದ ಸಿಬ್ಬಂದಿಗಳಿಗೆ MS –EXCEL ಕುರಿತಂತೆ ಆಗಸ್ಟ್ 19–2014 ರಂದು ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಪ್ರಶಾಂತರವರು ಭಾಗವಹಿಸಿದ್ದರು ಮುಖ್ಯವಾಗಿ ಎಂಎಸ್ ವರ್ಡ್, ಎಂಎಸ್, ಎಕ್ಸಲ್ ಫಾರ್ಮುಲಗಳನ್ನು ತಿಳಿಯಪಡಿಸಲಾಯಿತು.

14. ಸಿಬ್ಬಂದಿಗಳಿಗೆ ವರದಿ ತಯಾರಿಸುವ ಹಾಗೂ ದಾಖಲೆಗಳನ್ನು ನಿರ್ವಹಿಸುವ ಬಗ್ಗೆ ಸೆಪ್ಟಂಬರ್ 23 ರಂದು ತರಬೇತಿಯನ್ನು ಆಯೋಜಿಸಲಾಗಿತ್ತು, ಕರ್ನಾಟಕ ಹೆಲ್ತ್ ಪ್ರಮೋಷನ್ ಟ್ರಸ್ಟ್‌ನ ಶ್ರೀಮತಿ ಸುನೀತ ಬಿ.ಜೆ ರವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. ವ್ಯಕ್ತಿ ಅಧ್ಯಯನದ ಬಗ್ಗೆ ವರದಿ ಬರೆಯುವುದು ವಿಶ್ಲೇಷಣೆ ಮಾಡುವುದು ಹಾಗೂ ಕಾರ್ಯ ವಿಧಾನದ ಕೌಶಲ್ಯಗಳನ್ನು ತರಬೇತಿಯಲ್ಲಿ ತಿಳಿಸಲಾಯಿತು.

15. ಭಾಗವಹಿಸುವಿಕೆಯ ಸಂಶೋಧನಾ ವಿಧಾನದ ಬಗ್ಗೆ ದಿನಾಂಕ: 25–ಸೆಪ್ಟಂಬರ್ 2014 ರಲ್ಲಿ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು, ಈ ತರಬೇತಿಯನ್ನು ಡಾ|| ನಿರಂಜನರಾಧ್ಯರವರು ನಡೆಸಿಕೊಟ್ಟರು. ಈ ತರಬೇತಿಯಲ್ಲಿ ಮುಖ್ಯವಾಗಿ ಭಾಗವಹಿಸುವಿಕೆ, ಸಂಶೋಧನೆಯ ಬಗ್ಗೆ ಪರಿಕಲ್ಪನೆ ಮತ್ತು ಪ್ರಕ್ರಿಯೆಯ ಬಗ್ಗೆ ವಿವರವಾಗಿ ತಿಳಿಸಲಾಯಿತು.

**ಜನವರಿ-ಜುಲೈ- 2015**

1) ಬನ್ನಿಕುಪ್ಪೆ (ಬಿ) ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲೆಗಳ ಶಿಕ್ಷಕರುಗಳಿಗೆ ಶಿಕ್ಷಣ ಹಕ್ಕು ಕಾಯಿದೆ ಕುರಿತಂತೆ ಒಂದು ದಿನದ ತರಬೇತಿ ಕಾರ್ಯಾಗಾರವನ್ನು ದಿನಾಂಕ : 03–01–2015 ರಂದು ಹಮ್ಮಿಕೊಳ್ಳಲಾಗಿತ್ತು. ಮಗು ಮತ್ತು ಕಾನೂನು ಕೇಂದ್ರದ ಶಿಕ್ಷಣ ಕಾರ್ಯಕ್ರಮದ ಮುಖ್ಯಸ್ಥರಾದ ಡಾ|| ನಿರಂಜನಾರಾಧ್ಯರವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. ತರಬೇತಿಯ ಮೊದಲ ಅಧಿವೇಶನದಲ್ಲಿ ಶಿಕ್ಷಣ ಹಕ್ಕು ಕಾಯಿದೆಯ ಬಗ್ಗೆ ಸುದೀರ್ಘವಾಗಿ ತಿಳಿಸಲಾಯಿತು, ಎರಡನೆಯ ಅಧಿವೇಶನದಲ್ಲಿ ಶಿಕ್ಷಣ ಹಕ್ಕು ಕಾಯಿದೆ ಅನುಷ್ಠಾನಗೊಳಿಸುವಲ್ಲಿ ಶಿಕ್ಷಕರ ಜವಾಬ್ದಾರಿಗಳ ಬಗ್ಗೆ ಚರ್ಚಿಸಲಾಯಿತು, ಗುಚ್ಛ ಸಂಪನ್ಮೂಲ ವ್ಯಕ್ತಿಯು ಸೇರಿದಂತೆ ಸುಮಾರು 30 ಜನ ಶಿಕ್ಷಕರು ಭಾಗವಹಿಸಿದ್ದರು. ಈ ಕಾರ್ಯಾಗಾರವು ಬನ್ನಿಕುಪ್ಪೆ (ಬಿ) ಗ್ರಾಮದಲ್ಲಿರುವ ಗುಚ್ಛ ಸಂಪನ್ಮೂಲ ಕೇಂದ್ರ ದಲ್ಲಿ ನಡೆಯಿತು.

2) ರಾಷ್ಟ್ರೀಯ ಕಾನೂನು ಶಾಲೆ, ಮಗು ಮತ್ತು ಕಾನೂನು ಕೇಂದ್ರದ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆ, ಬಿಸಿಯೂಟ ತಯಾರಕರ ಮಹಿಳಾ ಸಂಘಟನೆ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ

ಸಹಯೋಗದೊಂದಿಗೆ, ದಿನಾಂಕ : 11-01-2015 ರಂದು ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ನಾಗವಾರ



ಗ್ರಾಮದಲ್ಲಿ ಜಿಲ್ಲಾ ಮಟ್ಟದ ಸಮುದಾಯ ಶೈಕ್ಷಣಿಕ ಸಮಾವೇಶವನ್ನು ಹಮ್ಮಿಕೊಂಡಿದ್ದು ಇದರ ಉದ್ಘಾಟನೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಾದ ಮೊಹಮ್ಮದ್ ಮೊಹಸಿನ್ ನೆರವೇರಿಸಿದರು. ಅವರು ಮಾತನಾಡುತ್ತಾ "ಸರ್ಕಾರಿ ಶಾಲೆಗಳನ್ನು ಮುಚ್ಚಲು ಪೋಷಕರಿಗೆ ಖಾಸಗಿ ಶಾಲೆಗಳ ಮೇಲಿರುವ ವ್ಯಾಮೋಹವೇ ಕಾರಣ" ಎಂದು ತಿಳಿಸಿದರು. ನಂತರ ಮಗು ಮತ್ತು ಕಾನೂನು ಕೇಂದ್ರದ ಶಿಕ್ಷಣ ತಜ್ಞರಾದ ಡಾ॥ ನಿರಂಜನಾರಾಧ್ಯರವರು ಮಾತನಾಡಿ 'ದೇಶದಲ್ಲಿ ಶಿಕ್ಷಣ ವ್ಯಾಪರೀಕರಣವಾಗಿದೆ, ಶಿಕ್ಷಣವನ್ನು ಹಣಕೊಟ್ಟು ಪಡೆಯುವ ದುಃಸ್ಥಿತಿ ಎದುರಾಗಿದೆ. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಉತ್ತಮವಾಗಿಲ್ಲ ಎಂಬ ಅಪವಾದ ಎಷ್ಟು ಸರಿ, ರಾಜ್ಯದಲ್ಲಿ ಸರ್ಕಾರಿ ಶಾಲೆಗಳ ಅವನತಿಗೆ ಪ್ರಮುಖವಾಗಿ ರಾಜಕಾರಣಿಗಳು ಮತ್ತು ಮಠಾಧೀಶರು ನಡೆಸುತ್ತಿರುವ ವ್ಯಾಪಾರಿಕರಣಕ್ಕೆ ಖಾಸಗಿ ಶಾಲೆಗಳೆ ಕಾರಣವಾಗಿವೆ ಎಂದರು, ಹಿರಿಯ ತಾಲ್ಲೂಕು ಸಿವಿಲ್ ನ್ಯಾಯಧೀಶರಾದ ಶ್ರೀಯುತ ಕಿರಣ್‌ಕಿಣಿ, 'ಸರ್ಕಾರಿ ಮಾದರಿ ಶಾಲೆ' ಪುಸ್ತಕ ಬಿಡುಗಡೆ ಮಾಡಿದರು. ಈ ಕಾರ್ಯಕ್ರಮದಲ್ಲಿ ಶಿಕ್ಷಣ ಇಲಾಖೆಯ ಮಧ್ಯಾಹ್ನದ ಉಪಹಾರ ಯೋಜನೆಯ ಜಂಟಿ ನಿರ್ದೇಶಕರಾದ ಶ್ರೀಯುತ ಬೆಳ್ಳಿಶೆಟ್ಟಿ, ಶಿಕ್ಷಕರ ಕಲ್ಯಾಣ ನಿಧಿ ಕಾರ್ಯದರ್ಶಿ ಪ್ರಹ್ಲಾದಗೌಡ, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಎಂ ವಿ ನಾರಾಯಣಸ್ವಾಮಿ ಮತ್ತು ಎಸ್.ಡಿ.ಎಂ.ಸಿ.ಯ ಸುಮಾರು 1000 ಸದಸ್ಯರು ಭಾಗವಹಿಸಿದ್ದರು.

3)ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಹೆಚ್ಚಿಸುವ ಸಲುವಾಗಿ ಮಗು ಮತ್ತು ಕಾನೂನು ಕೇಂದ್ರವು ಮೇ ತಿಂಗಳಿನಲ್ಲಿ ರಾಮನಗರ ಜಿಲ್ಲೆಯಾದ್ಯಂತ ವಿಶೇಷ ದಾಖಲಾತಿ ಆಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ ಕನ್ನಡ ಪರ ಸಂಘಟನೆಗಳು ಮತ್ತು ಶಿಕ್ಷಣಾ ಕ್ಷೇತ್ರದಲ್ಲಿ ದುಡಿಯುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಕೈಜೋಡಿಸಿದ್ದವು, ಸರ್ಕಾರಿ ಶಾಲೆಗಳಲ್ಲಿ ದೊರೆಯುವ ಸೌಲಭ್ಯಗಳನ್ನು ವಿವರಿಸುವ ಕರಪತ್ರಗಳನ್ನು ಪ್ರತಿಯೊಂದು ಮನೆಗಳಿಗೂ ತಲುಪಿಸಲಾಯಿತು. ಸರ್ಕಾರಿ ಶಾಲೆಗಳಲ್ಲಿ ದೊರೆಯುವ ಶೈಕ್ಷಣಿಕ ಸೌಲಭ್ಯಗಳನ್ನು ಕುರಿತು ಫ್ಲೆಕ್ಸ್



ಬ್ಯಾನರ್‌ಗಳನ್ನು ಆಯಕಟ್ಟಿನ ಸ್ಥಳದಲ್ಲಿ ಪ್ರದರ್ಶಿಸಲಾಯಿತು.

4) ಗುಣಮಟ್ಟದ ಕಲಿಕೆಗೆ ಒತ್ತುಕೊಡುವ ದೃಷ್ಟಿಯಿಂದ ಬನ್ನಿಕುಪ್ಪೆ (ಬಿ) ಗ್ರಾಮ ಪಂಚಾಯಿತಿ ವ್ಯಾಪ್ತಿಯ ಆರು ಹಳ್ಳಿಗಳಲ್ಲಿ ನನ್ನ ಜಾಗ ನನ್ನ ಕಲಿಕಾ ಕೇಂದ್ರಗಳನ್ನು ನಡೆಸಲಾಯಿತು, ಈ ಎಲ್ಲಾ ಕೇಂದ್ರಗಳನ್ನು ಸಮುದಾಯದ ಸಹಕಾರದೊಂದಿಗೆ ಸರ್ಕಾರಿ ಶಾಲೆಗಳ ಕೊಠಡಿಯಲ್ಲಿಯೇ ನಡೆಸಲಾಯಿತು, ಒಂದನೇ



ತರಗತಿಯಿಂದ 8ನೇ ತರಗತಿ ವರೆಗಿನ ಸುಮಾರು 160 ಜನ ಮಕ್ಕಳು ಇದರ ಸದುಪಯೋಗ ಪಡೆದುಕೊಂಡರು, ಸಮುದಾಯದ ಜನರಿಂದ ಮೆಚ್ಚುಗೆ ವ್ಯಕ್ತವಾಯಿತು.

5)ಶಿಕ್ಷಣ ಹಕ್ಕು ಕಾಯಿದೆ-2009 ನ್ನು ವ್ಯಾಪಕವಾಗಿ ಜಾಗೃತಿ ಮೂಡಿಸುವ ಸಲುವಾಗಿ ಶಿಕ್ಷಣ ಹಕ್ಕು ಕಾಯಿದೆ ನಿಬಂಧನೆಗಳನ್ನು ಒಳಗೊಂಡ ಪಾಕೆಟ್ ಕ್ಯಾಲೆಂಡರ್‌ಗಳನ್ನು ಕರ್ನಾಟಕ ರಾಜ್ಯದಾದ್ಯಂತ ವಿತರಿಸಲಾಯಿತು. ಸಾರ್ವಜನಿಕ ಶಿಕ್ಷಣ



ಇಲಾಖೆಯ ಉನ್ನತ ಅಧಿಕಾರಿಗಳು, ಜಿಲ್ಲಾ ಉಪನಿರ್ದೇಶಕರುಗಳು, ಕ್ಷೇತ್ರಶಿಕ್ಷಣಾಧಿಕಾರಿಗಳು, ಶಿಕ್ಷಕರು ಮತ್ತು ಎಸ್,ಡಿ,ಎಂ,ಸಿ, ಸದಸ್ಯರುಗಳಿಗೆ ಒಟ್ಟು ಸುಮಾರು 2000 ಪ್ರತಿಗಳನ್ನು ವಿತರಿಸಲಾಯಿತು.

6) ಶಿಕ್ಷಣ ಹಕ್ಕು ಉಪನ್ಯಾಸ ಸರಣಿಯ ಕಾರ್ಯಕ್ರಮದಡಿಯಲ್ಲಿ ಎರಡು ತ್ರೈಮಾಸಿಕ ಉಪನ್ಯಾಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು, ಮೊದಲ ಉಪನ್ಯಾಸ ಕಾರ್ಯಕ್ರಮವು ದಿನಾಂಕ: 28–02–2015 ರಂದು ನಡೆಯಿತು. ಬೆಂಗಳೂರಿನ ಸರ್ಕಾರಿ ವಿಜ್ಞಾನ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಶ್ರೀಯುತ ಎಂ. ಆರ್. ನಾಗರಾಜುರವರು "ಶಾಲೆಗಳಲ್ಲಿ ವಿಜ್ಞಾನ ಬೋಧನೆ: ಅವಕಾಶಗಳು ಮತ್ತು ಸವಾಲುಗಳು". ಎಂಬ ವಿಷಯದ ಬಗ್ಗೆ ಉಪನ್ಯಾಸ ಮಂಡಿಸಿದರು, ಶಿಕ್ಷಕರು ಎಸ್,ಡಿ,ಎಂ,ಸಿ ಸದಸ್ಯರು ಮತ್ತು ಸಾರ್ವಜನಿಕರು ಸೇರಿದಂತೆ ಸುಮಾರು 60 ಜನ ಭಾಗವಹಿಸಿದ್ದರು.



ಎರಡನೆಯ ಉಪನ್ಯಾಸ ಕಾರ್ಯಕ್ರಮವು ದಿನಾಂಕ :27–6–2015 ರಂದು ನಡೆಯಿತು. ಸಾರ್ವಜನಿಕ ಶಿಕ್ಷಣ ಇಲಾಖೆಯ ನಿವೃತ್ತ ನಿರ್ದೇಶಕರಾದ ಶ್ರೀ ಹನುಮಂತರಾಯಪ್ಪನವರು" ಸರ್ಕಾರಿ ಶಾಲೆಗಳ ಸಬಲೀಕರಣ: ಸಾಧ್ಯತೆಗಳು ಮತ್ತು ಸವಾಲುಗಳು". ಎಂಬ ವಿಷಯದ ಬಗ್ಗೆ ಉಪನ್ಯಾಸ ಮಂಡಿಸಿದರು. ಶಿಕ್ಷಕರು, ಎಸ್,ಡಿ,ಎಂ,ಸಿ ಸದಸ್ಯರು ಮತ್ತು ಸಾರ್ವಜನಿಕರು ಸೇರಿದಂತೆ ಸಮಾರು 70 ಜನ ಭಾಗವಹಿಸಿದ್ದರು. ಈ ಎರಡು ಉಪನ್ಯಾಸ ಕಾರ್ಯಕ್ರಮಗಳು ಬೆಂಗಳೂರಿನ ಗಾಂಧಿನಗರದಲ್ಲಿರುವ ಶಿಕ್ಷಕರ ಸಂಘದ ಕಛೇರಿಯಲ್ಲಿನ ಸಭಾಂಗಣದಲ್ಲಿ ನಡೆದವು.

7) ಶಿಕ್ಷಣ ಕಾರ್ಯಕ್ರಮದ ಮುಖ್ಯಸ್ಥರಾದ ಡಾ॥ ನಿರಂಜನಾರಾಧ್ಯರವರು ದಿನಾಂಕ :5–5–2015 ರಂದು ನಡೆದ ಬೆಂಗಳೂರು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರಮುಖ ಭಾಷಣಕಾರರಾಗಿ ಭಾಗವಹಿಸಿ "ಶಿಕ್ಷಣ ಹಕ್ಕು ಮತ್ತು ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಅನುಷ್ಠಾನಕ್ಕೆ ಇರುವ ಸವಾಲುಗಳು", ಎಂಬ ವಿಷಯದ ಬಗ್ಗೆ ಭಾಷಣ ಮಾಡಿದರು ಸುಮಾರು 2000 ಕ್ಕಿಂತ ಹೆಚ್ಚು ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದರು.ಈ ಸಮ್ಮೇಳನವು ಚೌಡಯ್ಯ ಮೇಮೊರಿಯಲ್ ಹಾಲ್‌ನಲ್ಲಿ ಆಯೋಜನೆಗೊಂಡಿತ್ತು.

8) ರಾಮನಗರ ಜಿಲ್ಲಾ ಮಟ್ಟದ ಎಸ್,ಡಿ,ಎಂ,ಸಿ, ಸಮನ್ವಯ ವೇದಿಕೆಯ ಎರಡು ತ್ರೈಮಾಸಿಕ ಸಭೆಗಳು ನಡೆದವು. ಮೊದಲನೆಯ ತ್ರೈಮಾಸಿಕ ಸಭೆಯು ದಿನಾಂಕ :28–02–2015 ರಂದು ನಡೆಯಿತು. ಜಿಲ್ಲೆಯ ನಾಲ್ಕು ತಾಲ್ಲೂಕುಗಳನ್ನು ಪ್ರತಿನಿಧಿಸುವ ಸುಮಾರು 35 ಎಸ್,ಡಿ,ಎಂ,ಸಿ,ಸಿ,ಎಫ್, ಪದಾಧಿಕಾರಿಗಳು ಭಾಗವಹಿಸಿದ್ದರು, ಮುಖ್ಯವಾಗಿ ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ಎಸ್,ಡಿ,ಎಂ,ಸಿ ವೇದಿಕೆಗಳನ್ನು ರಚಿಸಲು ಮತ್ತು ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ರೂಪುರೇಷೆಗಳ ಬಗ್ಗೆ ಚರ್ಚಿಸಲಾಯಿತು. ಎರಡನೇ ತ್ರೈಮಾಸಿಕ ಸಭೆಯು ದಿನಾಂಕ: 27–06–2015 ರಂದು ನಡೆಯಿತು, ಒಟ್ಟು 47 ಜನ ಎಸ್,ಡಿ,ಎಂ,ಸಿ,ಸಿ,ಎಫ್, ಪದಾಧಿಕಾರಿಗಳು ಭಾಗವಹಿಸಿದ್ದರು, ಈ ಸಭೆಯಲ್ಲಿ ನೂತನವಾಗಿ ಜಿಲ್ಲಾ ಎಸ್,ಡಿ,ಎಂ,ಸಿ,ಸಿ,ಎಫ್, ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಈ ಎರಡು ಸಭೆಗಳು ಬೆಂಗಳೂರಿನ ಗಾಂಧಿನಗರದಲ್ಲಿರುವ ಶಿಕ್ಷಕರ ಸಂಘದ ಕಛೇರಿಯಲ್ಲಿನ ಸಭಾಂಗಣದಲ್ಲಿ ನಡೆದವು.

9) ರಾಜ್ಯ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆಯು ಬೆಂಗಳೂರಿನ ಶಿಕ್ಷಕರ ಸದನದಲ್ಲಿ ಎಸ್,ಡಿ,ಎಂ,ಸಿ, ಸ್ಥಿತಿಗತಿಗಳ ಬಗ್ಗೆ ಸಮಾಲೋಚನ ಸಭೆಯನ್ನು ದಿನಾಂಕ: 30–06–2015 ರಂದು ಹಮ್ಮಿಕೊಳ್ಳಲಾಯಿತು. "ಕಳೆದ ಹಾಗೂ ಪ್ರಸುತ್ತ ಸರ್ಕಾರದ ನಿರ್ಲಕ್ಷ್ಯದಿಂದ ಸುಮಾರು ಐದು ಸಾವಿರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು ಮುಚ್ಚಿವೆ" ಎಂದು ಮಗು ಮತ್ತು ಕಾನೂನು ಕೇಂದ್ರದ ಮುಖ್ಯಸ್ಥರಾದ ಡಾ॥ ನಿರಂಜನಾರಾಧ್ಯರವರು ವಿಷಾದಿಸಿದರು. ಈ ಕಾರ್ಯಕ್ರಮದಲ್ಲಿ ರಾಜ್ಯ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ



ಸಮನ್ವಯ ವೇದಿಕೆಯ ಗೋವಿಂದರಾಜು, ಸಾರ್ವಜನಿಕ ಶಿಕ್ಷಣ ಇಲಾಖೆಯ ಶ್ರೀ ಜಯಕುಮಾರ್, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಶ್ರೀ ಬಸವರಾಜು ಗುರಿಕಾರ್‌ರವರು ಉಪಸ್ಥಿತರಿದ್ದರು.

## ಲೀಗಲ್ ಐ

ಸ್ವಾಗತ ರಾಹ

# ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ: ಕಠಿಣ ಶಿಕ್ಷೆಯೊಂದೇ ಮಾರ್ಗವೇ?

**ದಿನಾಂಕ: 30.10.2015ರ "ದಿ ಹಿಂದು" ಪತ್ರಿಕೆಯ "ಓದುಗರ ಅಭಿಪ್ರಾಯ" ವಿಭಾಗದಲ್ಲಿ ಪ್ರಕಟಿಸಲ್ಪಟ್ಟಿದ್ದು.**

ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯದ ವಿಷಯದಲ್ಲಿ ಮದರಾಸು ಉಚ್ಚನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ಕಿರುಬಾಕರನ್ ಅವರ ತೀರ್ಮಾನದಂತೆ ಅಪರಾಧಿಗಳನ್ನು ನಿರ್ವೀರ್ಯಗೊಳಿಸುವುದರಿಂದ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವನ್ನು ತಡೆಯಲು ಮತ್ತು ನಿಯಂತ್ರಿಸಲು ಐಂದ್ರಜಾಲಿಕ ಫಲಿತಾಂಶವನ್ನೀಯಬಲ್ಲದು. ಸಮಸ್ಯೆಯನ್ನು ಸರಿಪಡಿಸುವುದರಲ್ಲಿ ಕಾನೂನು ಅಸಮರ್ಥವೂ ಪ್ರಭಾವಹೀನವೂ ಆಗಿದ್ದರೆ, ಈ ನ್ಯಾಯಾಲವು ಕೇವಲ ಮೌನ ವೀಕ್ಷಕನಂತೆ ನಿಶ್ಚಲವಾಗಿ ಕೈಕಟ್ಟಿ ಕುಳಿತಿರಲು ಸಾಧ್ಯವಿಲ್ಲ ಮತ್ತು ನೆತ್ತರು ಕುದಿಸುವ ಸಾಮೂಹಿಕ ಮಕ್ಕಳ ಮೇಲಿನ ಅತ್ಯಾಚಾರಗಳು ಭಾರತದ ಬೇರೆ ಬೇರೆ ಭಾಗಗಳಲ್ಲಿ ನಡೆದ ಇತ್ತೀಚಿನ ಅಲಕ್ಷಿಸ ಲ್ಪಟ್ಟ ಘಟನೆಗಳನ್ನು ಗಮನಿಸುತ್ತಾ ತಮ್ಮ ಸಲಹೆ ಯನ್ನು ಆಧಾರಿ ಸುತ್ತಾರೆ.

ಸಮಸ್ಯೆ ಯನ್ನು ಸರಿಯಾಗಿ ಪತ್ತೆಹಚ್ಚುವ ಮೊದಲೇ ತೀವ್ರ ಪರಿಣಾಮ ಬೀರುವ ಔಷಧಿಯ ಪ್ರಯೋಗದಲ್ಲಿ ದೆಹಲಿ ಸರಕಾರದಂತೆ ಮದರಾಸು ಉಚ್ಚನ್ಯಾಯಾಲಯವೂ ನಂಬಿಕೆಯನ್ನಿಟ್ಟಿದೆ. ನಾವು ಕ್ಷಣಕಾಲ ಯೋಚಿಸಿ ನಮ್ಮನ್ನೇ ಪ್ರಶ್ನಿಸಿಕೊಳ್ಳಬೇಕಿದೆ. ನಿರ್ವೀರ್ಯಗೊಳಿಸುವುದರಿಂದಾಗಲೀ, ಮರಣದಂಡನೆ ಅಥವಾ ದೀರ್ಘಕಾಲೀನ ಸೆರೆಮನೆ ವಾಸದಂತಹ ಶಿಕ್ಷೆಗಳು ಅಪರಾಧಗಳನ್ನು ನಿಯಂತ್ರಿಸುವುದರಲ್ಲಿ ಸಹಾಯಕವೇ ಅಥವಾ ಅಪರಾಧಗಳ ಹೆಚ್ಚಳಕ್ಕೆ ಸಹಾಯಕವೇ?

ಕೆಳಸ್ತರದ ಕನ್ವಿಕ್ಷನ್‌ಗಳ ಬಗ್ಗೆ ವಿವರಣೆ: ರಾಷ್ಟ್ರೀಯ ಕ್ರಿಮಿನಲ್ ದಾಖಲೆಗಳ ಬ್ಯೂ ರೋದ ಪ್ರಕಾರ, ನ್ಯಾಯಾಲಯದತೀರ್ಪಿನ ಲ್ಲಿ ತೋರಿಸಲ್ಪಟ್ಟಿರುವ ಮಾದರಿ ವಿವರ ದಂತೆ ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆಯ ಕಾನೂನು 2012ರ (ಪೋಕ್ಸೋ 2012) ಅಡಿಯಲ್ಲಿ ಆರೋಪಿಸಲ್ಪಟ್ಟ ಅಪರಾಧಗಳು ಕೇವಲ ಶೇಕಡಾ 2.4ರಷ್ಟು (ನವೆಂಬರ್ 2012ರಿಂದ ಮಾರ್ಚ್ 2015 ರವರೆಗೆ) ಲೈಂಗಿಕ ಅಪರಾಧಗಳು ವರದಿಯಾದ ನಂತರ ಏನಾಯಿತು ಎಂಬುದನ್ನು ಹೆಚ್ಚಿಲ್ಲದಿ ದ್ದರೂ ಅಷ್ಟೇ ಮುಖ್ಯವಾಗಿ ಪರಿಗಣಿಸ ಬೇಕಾಗಿದೆ. ಕ್ರಿಮಿನಲ್ ಜಸ್ಟಿಸ್ ಸಿಸ್ಟಮ್‌ನ ಪರಿ ಣಾಮಕಾರಿತ್ವಕ್ಕೆ ಮತ್ತು ವಿಶ್ವಾಸರ್ಹತೆ ದೌರ್ಜನ್ಯಕ್ಕೊಳಗಾದವ ರನ್ನು ಹೇಗೆ ಕಾಣಲಾಗುವುದು, ಲೈಂಗಿಕ ಅಪರಾಧಗಳನ್ನು ಹೇಗೆ ಪತ್ತೆ ಹಚ್ಚಲಾಗುವುದು ಮತ್ತು ವಿಚಾರಣೆ ನಡೆಸುವುದರ ಮೇಲೆ ಅವಲಂಬಿಸಿದೆ. ಹಾಗಿದ್ದರೂ ದೃಢೀಕರಿಸಿರುವ ಅಪರಾಧಗಳ ದುರ್ಬಲ ಪ್ರಮಾಣದ ಬಗೆಗೆ ಮದರಾಸು ಉಚ್ಚನ್ಯಾಯಾಲಯವು ಗಮನಹರಿಸಿಲ್ಲ. ತೀವ್ರ ಹೆಚ್ಚಿನ ಸಂಖ್ಯೆಯ ದೂರುಗಳಲ್ಲಿ ಆಪಾದಿತನು ಬಿಡುಗಡೆ ಆಗುತ್ತಾನೆ ಎಂಬುದನ್ನು ಪ್ರಶ್ನಿಸಲು ಇದೇ ಸಂದರ್ಭ ಉತ್ತಮವಲ್ಲವೇ?

ಲೈಂಗಿಕ ದೌರ್ಜನ್ಯ ನಡೆದೇ ಇಲ್ಲವೆಂದು ನ್ಯಾಯಾಲಯದಲ್ಲಿ

ದೌರ್ಜನ್ಯಕ್ಕೆ ಒಳಗಾದವರೇ ಯಾಕೆ ಹೇಳಿಕೆ ನೀಡುವರು ಮತ್ತು ದೂರುಗಳಿಗೆ ವಿರುದ್ಧವಾಗಿಯೇ ಬದಲಾಗುವರು? ಹೀಗೆ ತಿರುಗಿಬೀಳಲು ಬಾಹ್ಯ ಒತ್ತಡಗಳು ಕಾರಣವೇ? ಅಥವಾ ಬೆದರಿಕೆ ಕಾರಣವೇ ಎಂಬುದನ್ನು ವಿಚಾರಿಸಲಾಗಲೀ ಅಥವಾ ವೈದ್ಯಕೀಯ ಪುರಾವೆಗಳನ್ನು ಪರಿಶೀಲಿಸಲಾಗಲೀ ವಿಚಾರಣಾಧೀನ ನ್ಯಾಯಾಲಯವು ಪರಿಗಣಿಸುವುದರಲ್ಲಿ ಏಕೆ ಸೋತಿದೆ? ಪ್ರಾಸಿಕ್ಯೂಟರ್ ಮತ್ತು ನ್ಯಾಯಾಧೀಶರು ವಿರುದ್ಧ ಹೇಳಿಕೆ ನೀಡಬೇಕಾದ 12 ವರ್ಷದ ಬಾಲಕಿಯೊಬ್ಬಳ ಪರಿಸ್ಥಿತಿಯ ಬಗ್ಗೆ ಗಮನಸೋಣ. ಅವಳ ಹೇಳಿಕೆ ಅತಿ ಕಡಿಮೆಯೆಂದರೆ 10 ವರ್ಷಗಳ ಸೆರೆಮನೆವಾಸವನ್ನು ಒದಗಿಸಬಲ್ಲುದು ಮತ್ತು ಇದು ಆಜೀವಪರ್ಯಂತ ವಾಗಲೂಬಹುದು. ಸಾಮಾಜಿಕವಾಗಿ ಅವಳ ಕುಟುಂಬವು ತಿರಸ್ಕೃತವಾಗಬಹುದು, ಬಡತನದಲ್ಲಿ ನರಳಬಹುದು ಮತ್ತು ಇನ್ನೂ ಕಷ್ಟಕರ ಸ್ಥಿತಿಗೆ ಬೀಳಲು ಅನಿವಾರ್ಯತೆ ಒದಗಬಹುದು.



ದೌರ್ಜನ್ಯಕ್ಕೊಳಗಾದ ಮಗುವಿನೊಂದಿಗೆ ವ್ಯವಹರಿಸಿ ವಿಸ್ತೃತ ವರದಿಯನ್ನು ಸಿದ್ಧಪಡಿಸಲು ಏಕೆ ಮುಂದೆ ಬರುವುದಿಲ್ಲ ಮತ್ತು ತನಿಖೆಯ ಸಂದರ್ಭದಲ್ಲಿ ಅವನು/ಅವಳು ಮಾನಸಿಕವಾಗಿ ಸಮಾಧಾನದಿಂದಿರುವಂತೆ ಮಾಡಲು ಏಕೆ ಮುಂದೆ ಬರುವುದಿಲ್ಲ? ವಿಚಾರಣಾ ನ್ಯಾಯಾಲಯಗಳು ಪರಿಹಾರವನ್ನು ಬಹು ವಿರಳವಾಗಿ ಯಾಕೆ ಘೋಷಿಸುತ್ತದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವಾಲಯವು 2007ರಲ್ಲಿ ನಡೆಸಿದ ಮಕ್ಕಳ ಮೇಲಿನ ದೌರ್ಜನ್ಯದ ಕುರಿತಾದ ಅಧ್ಯಯನದ ವರದಿಯನ್ನು ವಿಶೇಷವಾಗಿ ಪರಿಶೀಲಿಸಿದ ಮದರಾಸಿನ ಉಚ್ಚನ್ಯಾಯಾಲಯವು ವರದಿಯಲ್ಲಿನ ಶೇಕಡಾ 53.22 ಪ್ರಕರಣಗಳಲ್ಲಿ ಮಕ್ಕಳು ಒಂದು ಅಥವಾ ಹೆಚ್ಚು ವಿಧವಾಗಿ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿರುವರು ಎಂಬುದನ್ನು ಉಚ್ಚ ನ್ಯಾಯಾಲಯವು ಗಮನಿಸಿದೆ. ಅಧಿಕ ಸಂಖ್ಯೆಯ ಮಕ್ಕಳು ತಮ್ಮ ಹತ್ತಿರ ಸಂಬಂಧಿಕರಿಂದ, ನೆರೆಹೊರೆಯವರಿಂದ, ಗೆಳೆಯ ಗೆಳತಿಯರಿಂದ ಅಥವಾ ಉದ್ಯೋಗದಾತರಿಂದ ದೌರ್ಜನ್ಯಕ್ಕೊಳಗಾಗಿರುತ್ತಾರೆ ಎಂಬುದನ್ನು ವರದಿಯು ತೋರ್ಪಡಿಸುತ್ತದೆ. ಅಪರಿಚಿತರಿಂದಾಗುವ ಲೈಂಗಿಕ ದೌರ್ಜನ್ಯವು ಸಂಖ್ಯೆಯಲ್ಲಿ ಕಡಿಮೆ. ಪ್ರಸಕ್ತ ಸಂದರ್ಭದಲ್ಲಿ ಅಪ್ಪನ ಹೀಗೆ ಮರಣದಂಡನೆ ಅಥವಾ ಸಮಾಜದಿಂದ ತಿರಸ್ಕೃತವಾಗುವ ಸ್ಥಿತಿಯೊದಗುವಂತೆ ಅವಳು ವಿಚಾರಣೆಗೆ ಒಳಪಡುವುದಕ್ಕೆ ಸಿದ್ಧಳಾಗುವಳೇ?

ದಂಡನೆಯನ್ನು ತೀವ್ರಗೊಳಿಸುವುದು ನ್ಯಾಯವೆಂದು ಭಾವಿಸಿದರೂ ಲೈಂಗಿಕ ದೌರ್ಜನ್ಯದ ವರದಿಗಳ ಸಂಖ್ಯೆಯು ಹೆಚ್ಚಿದ್ದಲ್ಲಿ ವಿಪರೀತದ ಮತ್ತು ವಿರುದ್ಧದ ಪರಿಣಾಮಕ್ಕೆ ಕಾರಣವಾಗಬಹುದು. ಲೈಂಗಿಕ ದೌರ್ಜನ್ಯದ ಪ್ರಕರಣಗಳು ವರದಿಯಾಗುವುದೇ ವಿರಳ. ಪೋಕ್ಸೋ ಕಾನೂನಿನ ಬಗ್ಗೆ ಜಾಗೃತಿ ಮೂಡಿಸಿದುದರಿಂದ ಇತ್ತೀಚೆಗೆ ಅಂತಹ ವರದಿಗಳು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಬರುತ್ತಿವೆ ಅಲ್ಲದೆ ಮಗುವಿನ ವಯಸ್ಸನ್ನು 16 ರಿಂದ 18 ವರ್ಷಗಳಿಗೆ ಏರಿಸಿದುದು ಕಾರಣವೆನ್ನಬಹುದು. ಪೋಕ್ಸೋ ಕಾನೂನಿನನ್ವಯ ಬೆಂಗಳೂರಿನ ರಾಷ್ಟ್ರೀಯ ಕಾನೂನು ಶಾಲೆಯ ಮಗು ಮತ್ತು ಕಾನೂನು ಕೇಂದ್ರದಿಂದ ನಡೆಸಲಾದ ಪ್ರಾಥಮಿಕ ಅಧ್ಯಯನದಂತೆ ದೆಹಲಿಯ ವಿಶೇಷ ನ್ಯಾಯಾಲಯಗಳ ತೀರ್ಮಾನಗಳ ಬಗೆಗಿನ ವರದಿಯು ಬಹಳಷ್ಟು ಸಂಖ್ಯೆಯ ದೌರ್ಜನ್ಯಗಳು 16 ರಿಂದ 18 ವರ್ಷಗಳ ಹುಡುಗಿಯರನ್ನು ಒಳಗೊಂಡಿದ್ದು ಅವರ ಪ್ರಿಯತಮನಿಂದಲೇ ನಡೆದಿರುತ್ತವೆ

ಎಂದು ಕುಟುಂಬದವರು ಅವರ ವಿರೋಧವಾಗಿಯೇ ದೂರು ಸಲ್ಲಿಸುತ್ತಾರೆ. ಇವುಗಳಲ್ಲಿ ಸಾಮಾನ್ಯ ಎಲ್ಲಾ ದೂರುಗಳೂ ಅಪರಾಧಿಯ ಬಿಡುಗಡೆಯಲ್ಲಿಯೇ ಕೊನೆಯಾಗುತ್ತದೆ ಮತ್ತು ಹುಡುಗಿಯರು ಆರೋಪಿಯನ್ನು ತಮ್ಮ ಸಮ್ಮತಿಯಿಂದಲೇ ಸೇರಿಕೊಂಡಿದ್ದೇವೆ ಮತ್ತು ಪರಸ್ಪರ ಒಪ್ಪಿಗೆಯಿಂದಲೇ ಸಂಬಂಧವನ್ನು ಇರಿಸಿಕೊಂಡಿದ್ದೇವೆ ಎಂದು ಹೇಳಿರುತ್ತಾರೆ.

## ಸಾಮಾಜಿಕ ವ್ಯವಸ್ಥೆ:

ಮಕ್ಕಳ ಕಲ್ಯಾಣಕ್ಕಾಗಿ ಪ್ರತ್ಯೇಕ ಸಚಿವಾಲಯ, ಶಾಲೆಗಳಲ್ಲಿ ಕಡ್ಡಾಯ ಲೈಂಗಿಕ ಶಿಕ್ಷಣ ಮತ್ತು ಭಾರತವನ್ನು ಪ್ರವೇಶಿಸಬಯಸುವ ವಿದೇಶೀಯರ ಆರೋಪಕ್ಕೆ ಸಂಬಂಧಪಟ್ಟ ವಿಷಯವನ್ನು ಸೇರ್ಪಡೆ ಮಾಡುವಂತೆ ವೀಸಾಫಾರ್ಮ್‌ನಲ್ಲಿ ತೀರ ಅವಶ್ಯವೆನಿಸುವ ಸಲಹೆಗಳನ್ನು ಕ್ರಿಮಿನಲ್ ನ್ಯಾಯಾಲಯದ ಮಿತಿಯ ಹೊರತಾಗಿಯೂ ಮದರಾಸಿನ ಉಚ್ಚನ್ಯಾಲಯವು ನೀಡಿದೆ.



ಅಪರಾಧಗಳ ಬಗ್ಗೆ ಹೆಚ್ಚು ಗಮನಹರಿಸಬೇಕಾಗಿದೆ. ತಡೆಯೊಡ್ಡುವಿಕೆ ಈ ಸಂಬಂಧವಾಗಿ ಜಾಗೃತಿ ಮೂಡಿಸುವ ಪ್ರಯತ್ನಗಳನ್ನು ಹೆಚ್ಚಿಸಲು ಪ್ರೋತ್ಸಾಹಿಸುವುದರೊಂದಿಗೆ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯವೆಸಗುವ ಹೊಣೆಗಾರ ವ್ಯಕ್ತಿಗಳನ್ನು ಸೇರಿಸಿ ತಡೆಯುವ ಕ್ರಮಗಳ ವಿಸ್ತೃತ ರೂಪ ಹೊಂದಿರಬೇಕು. ಆರೋಪಿಗಳೆಂದು ಅಪಾದಿಸಲ್ಪಟ್ಟವರನ್ನು ದೆವ್ವಗಳೆಂದೂ, ಪಿಶಾಚಿಗಳೆಂದೋ, ರಾಕ್ಷಸರೆಂದೋ ಹಣೆಪಟ್ಟಿ ಕಟ್ಟುವುದರಿಂದ ಲೈಂಗಿಕ ದೌರ್ಜನ್ಯಕ್ಕೆ ಕಾರಣವೆನಸುವ ವೈಜ್ಞಾನಿಕ ಮತ್ತು ಸಾಕ್ಷ್ಯಾಧಾರಿತ ಪ್ರತಿಕ್ರಿಯೆಗಳ ಅಗತ್ಯವನ್ನು ಅಲಕ್ಷಿಸುವ ತಪ್ಪು ಮಾಡುತ್ತೇವೆ. ಕಠಿಣ ಶಿಕ್ಷೆಯು ಪರಿಹಾರವಲ್ಲ ಎಂದು ಸಂಶೋಧನೆಗಳು ತೋರಿಸಿವೆ ಮತ್ತು ಕಾನೂನಿನ ತಿದ್ದುಪಡಿಯೊಂದಿಗೆ ನಮ್ಮ ಅನುಭವಗಳಿಂದ ಒಡಮೂಡಿದೆ.

ಹೆಚ್ಚಿನ ಸನ್ನಿವೇಶಗಳಲ್ಲಿ, ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯಕ್ಕೆ ದಂಡನೆಯನ್ನು ಹೆಚ್ಚಿಸಬೇಕೆಂಬ ಸಲಹೆಯು ದೌರ್ಜನ್ಯಕ್ಕೆ ಒಳಗಾದವರಿಗೆ ದೌರ್ಜನ್ಯವೆಸಗಿದವರು ಗೊತ್ತಿದ್ದವರೇ ಆಗಿರುವುದು ಮತ್ತು ಅವರು ಬಂಧುಗಳೂ ಆಗಿರುವರೆಂಬುದನ್ನು ಕಡೆಗಣಿಸಲಾಗುವುದಿಲ್ಲ.

ಕ್ರಿಮಿನಲ್ ಜಸ್ಟೀಸ್ ಸಿಸ್ಟಮ್ ಬದುಕಿನಲ್ಲಿ ಭ್ರಮನಿರಸನಗೊಂಡು ಕಂಗೆಟ್ಟಿರುವ ದೌರ್ಜನ್ಯಕ್ಕೊಳಗಾದವರಿಗೆ ಅವಲಂಬನೆಯನ್ನೋ, ರಕ್ಷಣೆಯನ್ನೋ ಒದಗಿಸಲಾರದು ಮತ್ತು ನ್ಯಾಯದಲ್ಲಿ ಸಮಾಧಾನ ಹೊಂದದು. ಇಂತಹ ಸನ್ನವೇಶದಲ್ಲಿ ಹೊಂದಾಣಿಕೆಯೇ ಯೋಗ್ಯ ಅಥವಾ ನ್ಯಾಯಾಲಯದ ವ್ಯವಹಾರದಿಂದ ಹಿಂದೆ ಸರಿಯುವುದೇ ಒಳ್ಳೆಯದೆಂದು ತೀರ್ಮಾನಿಸಿದ ದೌರ್ಜನ್ಯಕ್ಕೊಳಗಾದ ಕುಟುಂಬಗಳಿಗೆ "ಕಠಿಣ ದಂಡನೆಯು ಯೋಗ್ಯ"ವೆಂದು ನಿರ್ಣಯಿಸಿದರೆ ಅದು ನಿರುತ್ತೇಜಕವಾಗುವ ಇನ್ನೊಂದು ವಿಷಯ. ಲೈಂಗಿಕ ದೌರ್ಜನ್ಯಗಳಿಗೆ ಹೆಚ್ಚಿನ ಶಿಕ್ಷೆಯನ್ನು ವಿಧಿಸುವುದರಿಂದ ಪೀಡಿತರ

ಮನೋವೇದನೆಯನ್ನು ತೀವ್ರಗೊಳಿಸುವುದಲ್ಲದೆ ಅವರನ್ನು ತೀವ್ರ ಅಪಾಯಕ್ಕೆ ಸಿಲುಕಿಸುತ್ತೇವೆ. ಬದಲಾಗಿ ಇನ್ನೂ ಉತ್ತಮ ತನಿಖೆ, ಮಕ್ಕಳ ವಿಚಾರಣೆ, ವಿಚಾರಣೆಯ ಸಂದರ್ಭದಲ್ಲಿ ಮತ್ತು ಅನಂತರ ಬೆಂಬಲ ಮತ್ತು ಮಾನಸಿಕ ಸ್ವಾಸ್ಥ್ಯದ ಮರುನಿಯಂತ್ರಣದ ಕಡೆಗೆ ಲಕ್ಷ್ಯವಹಿಸುವುದು ಅಗತ್ಯ.

(ಸ್ವಾಗತ ರಾಹ ಅವರು ಬೆಂಗಳೂರಿನ ಎನ್.ಎಲ್.ಎಸ್.ಐ.ಯು.ವಿನ ಮಗು ಮತ್ತು ಕಾನೂನು ಕೇಂದ್ರಕ್ಕೆ ಸೇರಿದವರು ಮತ್ತು ಕಾನೂನು ಸಂಶೋಧಕರು.)

## ಕಮೆಂಟ್ಸ್:

**1) ಶ್ರೀ ಅಶೋಕ್ ಜಿ.ವಿ., ನ್ಯಾಯವಾದಿಗಳು, ಕೋರ್ಲೆಟ್ ಲೀಗಲ್‌ನ ಮ್ಯಾನೇಜಿಂಗ್ ಪಾರ್ಟ್‌ನರ್.**

"ಮಕ್ಕಳ ಮೇಲಿನ ಲೈಂಗಿಕ ಶೋಷಣೆಯ ದೂರುಗಳ ನಿರ್ವಹಣೆಯಲ್ಲಿ ಅಗತ್ಯವಾದ ಮೂಲ ಸೌಲಭ್ಯಗಳ ಕೊರತೆ, ಮಾನವ ಶಕ್ತಿ ಮತ್ತು ಪರಿಣಾಮಕಾರೀ ದೃಷ್ಟಿಕೋನ ಇವುಗಳು ಸಮಸ್ಯೆಗೆ ಕಾರಣವಾಗಿದೆ. ಸಮಸ್ಯೆಯೂ ತೀಕ್ಷ್ಣದಂಡನೆಯ ಲೋಪದಿಂದಲ್ಲ. ರಾಸಾಯನಿಕ ನಿಗ್ರಹಗಳ ಅಗತ್ಯದ ಕರೆಯು ಅನೇಕ ತಪ್ಪು ಗ್ರಹಿಕೆಗಳಿಂದಲೂ ಲೈಂಗಿಕ ದೌರ್ಜನ್ಯವು ಸಕಾರಣವಾಗಿಯೂ, ಕೇವಲ ಸಂಭೋಗಕ್ಕಾಗಿಯೇ ನಡೆದಿರುತ್ತದೆ ಎಂಬ ಭಾವನೆಯೇ ಕಾರಣವಾಗಿರುತ್ತದೆ. ಅಲ್ಲದೆ ಇಂತಹ ರಾಸಾಯನಿಕ ಪ್ರಯೋಗಗಳು, ಅಪರಾಧಗಳು ಮರುರಾವರ್ತಿತವಾಗುವುದನ್ನು ತಡೆಯುತ್ತವೆ ಎಂಬುದಕ್ಕೆ ಸರಿಯಾದ ಮಾಹಿತಿಯಾಗಲೀ ಅಧ್ಯಯನವಾಗಲೀ ಇಲ್ಲ. ಲೈಂಗಿಕ ಅಪರಾಧಿಗಳ ಬಗೆಗಿನ ಅಧ್ಯಯನದಲ್ಲಿ ನಿಕೊಲಸ್ ಕ್ರೋತ್ ಅವರು "ಲೈಂಗಿಕ ದೌರ್ಜನ್ಯಗಳ ಹೆಚ್ಚಿನ ಸಂದರ್ಭಗಳಲ್ಲಿ ಲೈಂಗಿಕ ಕ್ರಿಯಾರಾಹಿತ್ಯವೇ ಗಮನಾರ್ಹ ಸಂಖ್ಯೆಯಲ್ಲಿ ಕಾರಣವಾಗಿವೆ ಎಂದು ಹೇಳಿದ್ದಾನೆ. ವಸ್ತುತಃ ನಪುಂಸಕತೆಯು ಕೆಲವು ಸಂದರ್ಭಗಳಲ್ಲಿ ಶೋಷಿತರ ಮೇಲಿನ ಲೈಂಗಿಕ ದೌರ್ಜನ್ಯಕ್ಕೆ ಕಾರಣವಾಗಿರುತ್ತದೆ ಎಂದು ಪಾಶ್ಚಾತ್ಯ ಸಂಶೋಧನೆಗಳಿಂದ ತಿಳಿದು ಬಂದಿದೆ. ಆದರೆ ನಮ್ಮ ಭಯಾನ್ವಿತ ಮನಃಸ್ಥಿತಿ ಒಂದು ವ್ಯವಸ್ಥಿತ ಮತ್ತು ಪ್ರಾಮಾಣಿಕ ಲಕ್ಷ್ಯವನ್ನಿರಿಸಿ ಅಧ್ಯಯನಕ್ಕೆ ಮತ್ತು ಸಮಸ್ಯೆಯನ್ನು ಪರಿಶೀಲಿಸುವಲ್ಲಿ ಪ್ರಗತಿಯನ್ನು ಸಾಧಿಸಲು ತಡೆಯಾಗಿ ನಿಂತಿದೆ ಮತ್ತು ಅದರಿಂದಾಗಿಯೇ ನಮ್ಮ ಕಾನೂನುಗಳು ಸೋಲುತ್ತಲೇ ಇವೆ. ಸ್ವಾಗತರವರ ಲೇಖನ ಪ್ರಮುಖವಾಗಿ ಗಮನಕ್ಕೆ ತರುವುದೇನೆಂದರೆ, ಈ ದಿಶೆಯಲ್ಲಿ ದೋಷಪೂರ್ಣ ಪ್ರಾಧಾನ್ಯವು ಈ ವಿಭಾಗದ ಪರಿವರ್ತನೆಗೆ ಅಧಿಕೃತ ಒತ್ತು ನೀಡುವಂತೆ ಕರೆಯುತ್ತಿರುವುದು ಮತ್ತು ನಿಯಮ ನಿರ್ಮಾತೃಗಳಿಗೆ ಸರಿಯಾದ ದಿಕ್ಕನ್ನು ತೋರಿಸುವ ಆಶಾಭಾವನೆಯನ್ನು ಹೊಂದಿದೆ."

**2) ಕುಶಿ ಕುಶಾಲಪ್ಪ, ಎನ್‌ಫೋಲ್ಡ್, ಪ್ರೊ.ಸ್ಪೆಕ್ಟಿವ್ ಹೆಲ್ತ್ ಟ್ರಸ್ಟ್, ಸಮುದಾಯ ಯೋಜನೆಗಳ ಮುಖ್ಯಸ್ಥರು.**

"ಸನ್ಮಾನ್ಯ ನ್ಯಾಯಮೂರ್ತಿಗಳಾದ ಕಿಬಾಕರನ್ ಅವರು ಹೇಳಿದಂತೆ, ಕಾನೂನು ಗೊಂದಲದ ಸ್ಥಿತಿಯನ್ನು ಮತ್ತು ನಿರ್ವಹಿಸಲು ಪ್ರಭಾವಹೀನವೂ ಅಸಮರ್ಥವೂ ಆಗಿದೆ ಎಂಬುದನ್ನು ನಾನು ನಂಬುವುದಿಲ್ಲ ಮತ್ತು ಪರಿಶೀಲನೆಗೂ ಮರು ಪರಿಶೀಲನೆಗೂ ಒಳಪಡಿಸಬೇಕಾಗಿದೆ. ಸ್ವಾಗತರವರ ಲೇಖನವು ನಮ್ಮ ಮಕ್ಕಳ ರಕ್ಷಣೆಯ ವ್ಯವಸ್ಥೆಯನ್ನು ಇಂದಿನ ಎಲ್ಲ ನಿದರ್ಶನಗಳೊಂದಿಗೆ ಮುಂದುವರಿಯುವತ್ತ ಪ್ರತ್ಯಕ್ಷ ಎಲ್ಲ ಸನ್ನಿವೇಶಗಳೊಂದಿಗೆ ಬೊಟ್ಟು ಮಾಡಿದೆ. ಲೇಖನದ ಕೊನೆಯ ವಾಕ್ಯದಲ್ಲಿ ಹೇಳಲ್ಪಟ್ಟ ಹೆಚ್ಚಿನ ಎಲ್ಲ ಅಂಶಗಳು ಹೊಣೆಗಾರರೆನಿಸಿದವರಿಗೆ ಸೂಕ್ತ ತರಬೇತಿ ನೀಡುವುದರಿಂದ ಮತ್ತು ಸೂಕ್ಷ್ಮ ಗ್ರಾಹೀಕರಿಸುವ ನರಂತರ ಪ್ರಯತ್ನದಿಂದ ಸರಿಪಡಿಸಲು ಸಾಧ್ಯವಿದೆ. ದೌರ್ಜನ್ಯಕ್ಕೆ ಒಳಗಾದ ಮಕ್ಕಳೊಂದಿಗೆ ನಿರ್ವಹಿಸಿದ ನಮ್ಮ ಕಾರ್ಯಾನುಭವದಂತೆ, ದೂರಿನ ವಿಶ್ಲೇಷಣೆ, ವಿಚಾರ ವಿನಿಮಯಗಳು ಪೋಲೀಸರ ಪತ್ತೆದಾರಿಕೆಯಲ್ಲಿ ಮತ್ತು ಸಾಕ್ಷ್ಯಗಳ ಸೂಕ್ತ ಉಪಯೋಗಗಳಲ್ಲಿರುವ ಅಂತರವನ್ನು ಕಡಿಮೆಗೊಳಿಸಲು ದೀರ್ಘಕಾಲೀನ ಪ್ರಕ್ರಿಯೆಯಾಗಬಹುದು. ಅದೂ ಅಲ್ಲದೆ, ದೂರುಗಳ ಮೇಲ್ಮನವಿಗಳು ಮತ್ತು ಆರಿಸಿದ ನ್ಯಾಯ ತೀರ್ಮಾನಗಳ ಮರು ಪರಿಶೀಲನೆಗಳು ದೂರುಗಳು ಬಿದ್ದು ಹೋಗುತ್ತಿರುವುದೆಲ್ಲಿ? ಮತ್ತು ಶೋಷಿತರು ವಿರುದ್ಧವಾಗಿ ತಿರುಗಿ ಬೀಳುವುದೇಕೆ? ಎಂಬುದನ್ನು ಅರಿತುಕೊಳ್ಳಲು ಸಕ್ರಿಯವಾಗಿಯೇ ಪ್ರಯತ್ನಗಳ ಅಗತ್ಯವನ್ನು ಹೇಳುತ್ತವೆ. ಇದಕ್ಕಾಗಿ ಮನೋವಿಜ್ಞಾನಿಗಳ ಮತ್ತು ವೈದ್ಯರ ಒಂದು ಗುಂಪನ್ನು ನಿಯೋಜಿಸಿ ಮಾನಸಿಕ ಅವಲಂಬನೆಯನ್ನು ನೀಡಲು ಮತ್ತು ಸ್ವೀಕಾರಾರ್ಹ ಮತ್ತು ಸಾಧ್ಯವಾದ ಸಲಹೆಗಳನ್ನು ನೀಡಲು ವ್ಯವಸ್ಥೆ ಮಾಡುವುದು ಒಂದು ಪ್ರಮುಖ ಅಂಶವೇ ಆಗಿದೆ. ಪೋಕ್ಸೋ (POCSO Act) ಕಾನೂನು ಜಾರಿಗೆ ಬರುವವರೆಗೆ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯದ ಘಟನೆಗಳು ಪ್ರಕಾಶಕ್ಕೆ ಬರುತ್ತಿರಲಿಲ್ಲವೆಂದೇ ಹೇಳಬಹುದು. ಕಾನೂನನ್ನು ಜಾರಿಗೊಳಿಸಿದ ಬಳಿಕ ಕಳೆದ ಮೂರು ವರ್ಷಗಳಲ್ಲಿ ಲೈಂಗಿಕ ದೌರ್ಜನ್ಯದ ವರದಿಯನ್ನು ಒಪ್ಪಿಸಲು ಮಕ್ಕಳು ಮತ್ತು ಕುಟುಂಬಗಳು ಶೀಘ್ರ ನ್ಯಾಯ ಲಭಿಸುವುದೆಂಬ ಆಶಯದಿಂದ ಹಾಗೂ ಮಕ್ಕಳ ಸ್ನೇಹಿ ಪ್ರಕ್ರಿಯೆಗಳನ್ನು ಅನುಸರಿಸುತ್ತಾರೆ ಎಂಬ ನಂಬಿಕೆಯಿಂದ ಕೇಸ್ ದಾಖಲಿಸಲು ಮುಂದಾಗುತ್ತಿದ್ದಾರೆ. ಅಪರಾಧ ಪ್ರಮಾಣ 5%ಕ್ಕಿಂತ ಕಡಿಮೆ ಇದ್ದಾಗಲೂ ಮತ್ತು ಮಕ್ಕಳ ನಿರ್ದಿಷ್ಟ ಅವಶ್ಯಕತೆಯನ್ನು ಸರಿಪಡಿಸಲು ಮತ್ತೊಮ್ಮೆ ಸೋತಿರುವ ವ್ಯವಸ್ಥೆಯಿಂದ ಜನತೆಯು ದಂಡನೀತಿಯ ನ್ಯಾಯ ವ್ಯವಸ್ಥೆಯಲ್ಲಿ ಬೇಗನೇ ವಿಶ್ವಾಸವನ್ನು ಕಳೆದುಕೊಳ್ಳಬಹುದು.

.....4ನೇ ಪುಟದಿಂದ

ನಮ್ಮ ರಾಜ್ಯ ಕರ್ನಾಟಕ ಇದಕ್ಕೆ ಹೊರತಲ್ಲ.ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಮಕ್ಕಳ ಪ್ರಮಾಣ ಶೇಕಡ 41ರಷ್ಟು. ಆದರೆ ಹುಟ್ಟಿದ ಒಂದು ಸಾವಿರ ಮಕ್ಕಳಲ್ಲಿ 43 ಮಕ್ಕಳು ಒಂದು ವರ್ಷ ಪೂರೈಸುವುದರೊಳಗಾಗಿ ಅಪೌಷ್ಠಿಕತೆಯಿಂದ ಸಾವನ್ನಪ್ಪುತ್ತಿದ್ದಾರೆ. 6 ರಿಂದ 35 ತಿಂಗಳೊಳಗಿನ ಮಕ್ಕಳಲ್ಲಿ ಶೇಕಡ 83 ರಷ್ಟು ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಈ ಮೇಲಿನ ಅಂಕಿ ಅಂಶಗಳನ್ನು ಅವಲೋಕಿಸಿದಾಗ ಮಕ್ಕಳ ಅಪೌಷ್ಠಿಕತೆಯು ಒಂದು ಗಂಭೀರ ಸಮಸ್ಯೆಯಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.. ಮಕ್ಕಳ ಈ ಅಪೌಷ್ಠಿಕತೆಯನ್ನು ಮಕ್ಕಳ ಕುಂಠಿತ ಬೆಳವಣಿಗೆ, ಕಡಿಮೆ ತೂಕ ಹಾಗೂ ದೇಹ ಸಾಮರ್ಥ್ಯದ ಮೂಲಕ ಗುರುತಿಸಲಾಗುತ್ತದೆ. ಈ ಅಪೌಷ್ಠಿಕತೆಯಿಂದ ಮತ್ತು ಆಹಾರದ ಸಮಸ್ಯೆಯಿಂದ ಮಕ್ಕಳು ಸಾವನ್ನಪ್ಪುತ್ತಿರುವುದು ನಾಗರಿಕ ಸಮಾಜ ತಲೆತಗ್ಗಿಸಬೇಕಾದ ಸಂಗತಿಯಾಗಿದೆ.



ಕರ್ನಾಟಕ ರಾಜ್ಯ ದೇಶದ ಹಲವು ಬೆಳವಣಿಗೆಯ ಸೂಚಕಗಳಲ್ಲಿ ಅಭಿವೃದ್ಧಿಶೀಲ ರಾಜ್ಯ ಎನ್ನಿಸಿಕೊಂಡಿದೆ. ಆದರೆ ಹಸಿವಿನ ಮತ್ತು ಆಹಾರ ಅಭದ್ರತೆಯ ಪರಿಸ್ಥಿತಿ ಅದಕ್ಕೆ ಅನುಗುಣವಾಗಿಲ್ಲ. 2008ರ ಹಸಿವಿನ ಸೂಚಕ, ಸ್ವಾಮಿನಾಥನ್ ಫೌಂಡೇಶನ್ ಆಹಾರ ಅಭದ್ರತೆ ವರದಿ ಮತ್ತು ಮಾನವ ಅಭಿವೃದ್ಧಿ ವರದಿ 2005 ಇವು ಕರ್ನಾಟಕದಲ್ಲಿ ಹಸಿವಿನ ಪರಿಸ್ಥಿತಿ ಗಂಭೀರವಾಗಿದೆಎಂದು ಸೂಚಿಸುತ್ತದೆ. ಹಸಿವಿನ ಸೂಚಕದಲ್ಲಿ ಭಾರತದ 17 ಪ್ರಮುಖ ರಾಜ್ಯಗಳಲ್ಲಿ ಕರ್ನಾಟಕ 11 ನೇ ಸ್ಥಾನದಲ್ಲಿದೆ. ಹಸಿವಿನಿಂದ ಬಳಲುವ ಜನರ ಪ್ರಮಾಣ 2008 ರಲ್ಲಿ ಕರ್ನಾಟಕದಲ್ಲಿ ಶೇ. 28.1, ಅಂದರೆ, ಪ್ರತೀ ನಾಲ್ವರಲ್ಲಿ ಒಬ್ಬರು ಹಸಿವಿನಿಂದ ಬಳಲುತ್ತಿದ್ದಾರೆ. ಕರ್ನಾಟಕದ ಸಾವಿರ(5 ವರ್ಷಕ್ಕಿಂತ ಕಡಿಮೆ)ಮಕ್ಕಳಲ್ಲಿ 55 ಸಾಯುತ್ತವೆ. ಸಾವಿರ (5 ವರ್ಷಕ್ಕಿಂತ ಕಡಿಮೆ) ಮಕ್ಕಳಲ್ಲಿ 376 ಮಕ್ಕಳು ಕನಿಷ್ಠ ತೂಕ ಸಹ ಹೊಂದಿಲ್ಲ. ಅಂದರೆ ಪೋಷಕಾಂಶಗಳ ಅಭಾವದಿಂದ ನರಳುತ್ತಿವೆ.

ಸ್ವಾಮಿನಾಥನ್ ಫೌಂಡೇಶನ್‌ನ ಗ್ರಾಮೀಣ ಆಹಾರ ಭದ್ರತೆ ವರದಿ ಪ್ರಕಾರ ಪೋಷಕಾಂಶಗಳ ಅಭಾವದಿಂದ ನರಳುತ್ತಿರುವ ಗ್ರಾಮೀಣ ಮಕ್ಕಳ ಸಂಖ್ಯೆ 100ಕ್ಕೆ 39ರಿಂದ 43ಕ್ಕೆ ಏರಿದೆ. ಮಾನವ ಅಭಿವೃದ್ಧಿ ವರದಿ 2005ರ ಪ್ರಕಾರ ಕರ್ನಾಟಕದಲ್ಲಿ ರಕ್ತಹೀನತೆ ಇರುವ (ಮೂರು ವರ್ಷಕ್ಕಿಂತ ಕಡಿಮೆ ವಯಸ್ಸಿನ) ಮಕ್ಕಳ ಸಂಖ್ಯೆ 100ಕ್ಕೆ 71. ದಕ್ಷಿಣ ಕರ್ನಾಟಕದಲ್ಲಿ ಮಕ್ಕಳ ಮರಣ ಪ್ರಮಾಣ ಸಾವಿರಕ್ಕೆ 45 ಇದೆ. ಬೀದರ್, ಬಿಜಾಪುರ, ಗುಲ್ಬರ್ಗ, ಕೊಪ್ಪಳ, ಹಾವೇರಿ, ಗದಗ, ಧಾರವಾಡ ಜಿಲ್ಲೆಗಳಲ್ಲಿ 65ಕ್ಕೂ ಹೆಚ್ಚಿವೆ. ನಗರಗಳಲ್ಲಿ 56 ಇದ್ದರೆ, ಗ್ರಾಮಿಣ ಪ್ರದೇಶಗಳಲ್ಲಿ 96 ಇದೆ. ಈ ಮೇಲಿನ ಅಂಕಿ-ಸಂಖ್ಯೆಗಳನ್ನು ಗಮನಿಸಿದಾಗ ಕರ್ನಾಟಕದ ಮಕ್ಕಳು ಪೌಷ್ಠಿಕಾಂಶದ ಕೊರತೆಯಿಂದ ಮುಕ್ತರಾಗಿಲ್ಲ ಎಂಬುದು ಖಾತ್ರಿಯಾಗುತ್ತದೆ.

**ಸಂಪಾದನೆ ಮತ್ತು ಸಂಗ್ರಹ:** ಡಾ.ನಿರಂಜನಾರಾಧ್ಯ.ವಿ.ಪಿ
**ಕಾರ್ಯಕ್ರಮವಾರು ಮಾಹಿತಿ ಮತ್ತು ಸಹಾಯ:** ಅನುರೂಪ ಗಿಳಿಯಾಲ್, ಕುಮಾರಸ್ವಾಮಿ, ಅಂಜಲ ಶಿವಾನಂದ, ಕೃಷ್ಣ ಭಾರದ್ವಜ ಮತ್ತು ಸ್ಯಾಮ್ಯುಯಲ್ ಸತ್ಯಶೀಲನ್
**ಪ್ರಕಟಣೆ:** ಸಂಯೋಜಕರು, ಮಗು ಮತ್ತು ಕಾನೂನು ಕೇಂದ್ರ, ಭಾರತ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆ, ನಾಗರಬಾವಿ, ಅಂಚೆ ಪೆಟ್ಟಿಗೆ ಸಂಖ್ಯೆ-7201, ಬೆಂಗಳೂರು-560 242
**ವೆಬ್ ಸೈಟ್ :** www.nls.ac.in/ccl, **ಇಮೈಲ್:** ccl@nls.ac.in, **ಟೆಲಿಫ್ಯಾಕ್ಸ್ :** 080-23160528
**ಪ್ರಸ್ತುತಿ ಮತ್ತು ವಿನ್ಯಾಸ:** ಡಾ. ಟಿ.ಎಸ್. ವಿವೇಕಾನಂದ